ಐಕ್ಯರಂಗ

ಪಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 18 | ಏಪ್ರಿಲ್ 29, 1984 | ಬೆಲೆ 60 ಪೈಸೆ

ಸಿಐಟಿಯು ನಾಲ್ಕನೇ ರಾಜ್ಯ ಸಮ್ಮೇಳನ

ಕಾರ್ಮಿಕ ವರ್ಗದ ರಾಜಕೀಯಕ್ಕೆ ಅಗ್ರಸ್ಥಾನ

ಸಿಐಟಿಯುವಿನ ನಾಲ್ಕನೇ ಕರ್ನಾಟಕ ರಾಜ್ಯ ಸಮ್ಮೇಳನವು 1984 ಮೇ ತಿಂಗಳು 14, 15, 16 ಮತ್ತು 17 ರಂದು ಕರಾವಳಿ ನಗರ ಮಂಗಳೂರಿನಲ್ಲಿ ನಡೆಯಲಿದೆ. ಜಗತ್ತನ್ನು ಅಣುಯುದ್ಧದ ಅಂಚಿಗೆ ತಳ್ಳಲು ಇತರೆ ಸಾಮ್ರಾಜ್ಯಶಾಹಿಗಳ ಬೆಂಬಲದೊಂದಿಗೆ ಅಮೇರಿಕನ್ ಸಾಮ್ರಾಜ್ಯಶಾಹಿಯು ನಡೆಸುತ್ತಿರುವ ವಿನಾಶಕಾರಿ ದುಸ್ಸಾಹಸ ಮತ್ತು ಇದರೊಂದಿಗೆ ಭಾರತ ದೇಶವೂ ಸೇರಿದಂತೆ ಜಗತ್ತಿನಾದ್ಯಂತ ಬೆಳೆದು ಬರುತ್ತಿರುವ ವ್ಯಾಪಕ ಶಾಂತಿ ಚಳುವಳಿ ಹಾಗೂ ಇದರಲ್ಲಿ ಕಾರ್ಮಿಕ ವರ್ಗದ ಮುಖ್ಯ ಪಾತ್ರ; ಜಗತ್ತಿನಾದ್ಯಂತ ಸಮಾಜವಾದಿ ರಾಷ್ಟ್ರಗಳು ಮತ್ತು ಸಮಾಜವಾದಿ ಶಕ್ತಿಗಳು ಸಾಧಿಸಿರುವ ಅದ್ಭುತ ಮುನ್ನಡೆ; ದೇಶದಲ್ಲಿ ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದಿರುವ "ಬಂಡವಳ ಶಾಹಿ- ಭೂಮಾಲಕ" ಪ್ರಭುತ್ವ ಮತ್ತು ಸರಕಾರಗಳು ಅನುಸರಿಸಿಕೊಂಡು ಬಂದಿರುವ ಬಂಡವಾಳಶಾಹಿ ಪಥದ ಪರಿಣಾಮವಾಗಿ ಅತ್ಯಂತ ಆಳವಾಗಿ ಬೆಳೆದಿರುವ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟು; ಕಾರ್ಮಿಕ ವರ್ಗ, ರೈತರು ಹಾಗೂ ಹಳ್ಳಿಯ ಬಡವರು ಮತ್ತು ಜನಸಾಮಾನ್ಯರ ಮೇಲೆ ದಿನೇ ದಿನೇ ಹೆಚ್ಚುತ್ತಿರುವ ಬಿಕ್ಕಟ್ಟಿನ ಭಾರ; ಕಾರ್ಮಿಕ ವರ್ಗ ಹಾಗೂ ಜನಸಾಮಾನ್ಯರ ಜೀವನ ಮಟ್ಟದ ಮೇಲು ಅವರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆ ಸರಕಾರವು ನಡೆಸುತ್ತಿರುವ ಆಕ್ರಮಣ; ಅತಿ ಭಯಾನಕವಾಗಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ; ಹಿಂದುಳಿದವರು, ದುರ್ಬಲ ವರ್ಗದವರು ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರ; ಎಲ್ಲೆಲ್ಲೂ ತುಂಬಿರುವ ಭ್ರಷ್ಟಾಚಾರ; ಗಗನಕ್ಕೇರಿರುವ ಮತ್ತು ಏರುತ್ತಲೇ ಇರುವ ಬೆಲೆಗಳು; ಅಮೇರಿಕನ್ ಸಾಮ್ರಾಜ್ಯ ಶಾಹಿ ಮತ್ತು ಇನ್ನಿತರೆ ಸಾಮ್ರಾಜ್ಯ ಶಾಹಿಗಳು ಮತ್ತು ಆಂತರಿಕ ಛಿದ್ರಕಾರಿ ಶಕ್ತಿಗಳಿಂದ ಶ್ರಮಜೀವಿ ವರ್ಗ ಹಾಗೂ ಜನತೆಯ ಒಗ್ಗಟ್ಟು ಮತ್ತು ದೇಶದ ಸಮಗ್ರತೆಯ ಮೇಲೆ ನಡೆಯುತ್ತಿರುವ ಧಾಳಿ; ದಿನೇ ದಿನೇ ಹೆಚ್ಚುತ್ತಿರುವ ಬಹುಸಂಖ್ಯಾತ ಮತ್ತು ಅಲ್ಪ ಸಂಖ್ಯಾತ ಕೋಮುವಾದ ಹಾಗೂ ಪ್ರಾದೇಶಿಕವಾದ ಹಾಗೂ ಇತರೆ ಸಂಕುಚಿತವಾದಗಳು; ಇವೆಲ್ಲವನ್ನು ಎದುರಿಸಿ ಸಿಐಟಿಯುವಿನ ಮುತುವರ್ಜಿ ಮತ್ತು ಪ್ರಯತ್ನಗಳಿಂದ ದೇಶದಾದ್ಯಂತ ಬೆಳೆದು ಬರುತ್ತಿರುವ ಕಾರ್ಮಿಕ ವರ್ಗದ ಐಕ್ಯ ಹೋರಾಟ; ಪಶ್ಚಿಮ ಬಂಗಾಲ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡರಂಗ ಸರಕಾರಗಳ ಮಹತ್ವದ ಸಾಧನೆ ಮತ್ತು ದೇಶದಾದ್ಯಂತ ಎಡ ಪ್ರಜಾ ಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವತ್ತ ನಡೆಯುತ್ತಿರುವ ಪ್ರಯತ್ನ ಮತ್ತು ಈ ದೆಸೆಯಲ್ಲಿ ಸಾಧಿಸಿರುವ ಪ್ರಗತಿ – ಈ ಹಿನ್ನೆಲೆಯಲ್ಲಿ ಸಿಐಟಿಯುವಿನ ನಾಲ್ಕನೇ ರಾಜ್ಯ ಸಮ್ಮೇಳನವು ಸೇರಲಿದೆ.

"ಕಾರ್ಮಿಕ ವರ್ಗದ ಹೋರಾಟವನ್ನು ಕೇವಲ ಆರ್ಥಿಕ ಬೇಡಿಕೆಗಳ ಈಡೇರಿಕೆಗೆ ನಡೆಸುವ ಹೋರಾಟಕ್ಕೆ ಸೀಮಿತಗೊಳಿಸದೆ ಕಾರ್ಮಿಕ ವರ್ಗವು ರಾಜಕೀಯ ಹೋರಾಟ ನಡೆಸುವಂತೆಯೂ, ಮತ್ತು ಕಾರ್ಮಿಕ ವರ್ಗವು ತನ್ನ ನೇತೃತ್ವದ ಸ್ಥಾನವನ್ನು ಸ್ಥಾಪಿಸಿ ತನ್ನ ಮೇಲಿರುವ ಕ್ರಾಂತಿಕಾರಿ ಜವಾಬಾರಿಯನ್ನು ನಿರ್ವಹಿಸುವಂತೆಯೂ ಮಾಡುವುದಕ್ಕೆ ವಿಶೇಷ ಗಮನವನ್ನೀಯಲು ಸಿಐಟಿಯು ತೀರ್ಮಾನಿಸಿರುವ ಬೆನ್ನಲ್ಲಿ ರಾಜ್ಯದ ನಾಲ್ಕನೇ ಸಮ್ಮೇಳನವು ನಡೆಯಲಿದೆ." ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ವರ್ಗವನ್ನು ಒಗ್ಗೂಡಿಸಿ, ಅವರಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ, ಅವರನ್ನು ರಾಜಕೀಯ ಹೋರಾಟಗಳಲ್ಲೂ ಇತರೆ ಶೋಷಿತ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ನಡೆಯುವ ಹೋರಾಟಗಳಲ್ಲೂ ಭಾಗವಹಿಸುವಂತೆ ಮಾಡಿ ಕಾರ್ಮಿಕ ವರ್ಗದ ಹಿಂದೆ ಉಳಿದೆಲ್ಲಾ ಶೋಷಿತ ಜನರು ಬರುವಂತೆ ಮಾಡಿ ಕಾರ್ಮಿಕ ವರ್ಗದ ರಾಜಕೀಯಕ್ಕೆ ಅಗ್ರಸ್ಥಾನ ದೊರಕಿಸಿಕೊಡುವ ದಿಸೆಯಲ್ಲಿ ನಡೆಯುವ ಪ್ರಯತ್ನಗಳಿಗೆ ನಾಲ್ಕನೇ ರಾಜ್ಯ ಸಮ್ಮೇಳನವು ಸ್ಫೂರ್ತಿ ಮತ್ತು ಮಾರ್ಗದರ್ಶನಗಳನ್ನು ಕೊಡಬೇಕು. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ರೈತಾಪಿ ಜನತೆಯ ವ್ಯಾಪಕ ಹೋರಾಟಗಳು ನಡೆದಿವೆ.

ರೈತ ಮತ್ತು ಕಾರ್ಮಿಕರನ್ನು ಒಗ್ಗೂಡಿಸಿ, ರೈತರ ಹೋರಾಟಗಳಿಗೆ ಸರಿಯಾದ ದಿಕ್ಕನ್ನು ತೋರಿಸಲು ನಡೆದಿರುವ ಪ್ರಯತ್ನಗಳಲ್ಲಿ, ಅದರಲ್ಲೂ ಮುಖ್ಯವಾಗಿ 1980 ಡಿಸೆಂಬರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ಬೆಂಗಳೂರಿನಲ್ಲಿ ಸಂಘಟಿಸಿದ್ದ ಬೃಹತ್ ಮತ ಪ್ರದರ್ಶನ ಮತ್ತು ಆನೇಲೆ ನಾಲ್ಕು ಪಕ್ಷಗಳ ನೇತೃತ್ವದಲ್ಲಿ ನಡೆಸಿರುವ ರೈತ ಜಾತಾ ಹಾಗೂ ಬೆಂಗಳೂರಿನಲ್ಲಿ ನಡೆದ ರೈತ-ಕಾರ್ಮಿಕರ ಚಾರಿತ್ರಿಕ ಮತ ಪ್ರದರ್ಶನ ಇವುಗಳಲ್ಲಿ ರಾಜ್ಯದ ಸಿ.ಐ.ಟಿ.ಯು. ಮುಖ್ಯ ಪಾತ್ರ ವಹಿಸಿದ್ದಿತು. ಇದೀಗ ರಾಜ್ಯದ ರೈತರನ್ನು ತಪ್ಪುದಾರಿಗೆಳೆಯಲು ರುದ್ರಪ್ಪ ಮತ್ತು ಸಂಗಡಿಗರಿಂದ ಮತ್ತೆ ಪ್ರಯತ್ನಗಳು ನಡೆಯುತ್ತಿವೆ. ರಾಜ್ಯದಲ್ಲಿ ರೈತರ ಮತ್ತು ಹಳ್ಳಿಯ ಬಡವರ ಹೋರಾಟಗಳಿಗೆ

(6ನೇ ಪುಟ ನೋಡಿ)

ಓದುಗರ, ಏಜಂಟರ ಗಮನಕ್ಕೆ

ಐಕ್ಯರಂಗ ಪತ್ರಿಕೆಯ ಮೇ ದಿನದ ವಿಶೇಷಾಂಕದ ಕೆಲಸದ ಒತ್ತಡದಿಂದಾಗಿ 6-5-84 ರ ಸಂಚಿಕೆ ಪ್ರಕಟವಾಗುವುದಿಲ್ಲ. ವಿಶೇಷ ಸಂಚಿಕೆಯನ್ನು 13-5-84 ರಂದು ಹೊರಡಿಸಲಾಗುವುದು. ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದ್ದಲ್ಲಿ ಕೂಡಲೇ ತಿಳಿಸಬೇಕಾಗಿ ವಿನಂತಿ.

ಸಂಪಾದಕ ಮಂಡಳಿ

ಮೇ ದಿನಾಚರಣೆಯ ಮಹತ್ವ

ಮೇ ಒಂದರ ದಿನಾಂಕವನ್ನು ಜಗತ್ತಿನಾದ್ಯಂತ ಶ್ರಮಜೀವಿಗಳ ಅಂತರರಾಷ್ಟ್ರೀಯ ಐಕ್ಯಮತದ ದಿನವನ್ನಾಗಿ ಆಚರಿಸಲಾಗುತ್ತಿದೆ. ಮೇ ದಿನದಂದೇ ಈ ದಿನಾಚರಣೆ ಏಕೆ ? 1886 ರಲ್ಲಿ ಅಮೇರಿಕನ್ ಕಾರ್ಮಿಕರು 8 ತಾಸುಗಳ ದುಡಿಮೆ ದಿನಕ್ಕಾಗಿ ಚಳುವಳಿ ಹೂಡಿದರು. ಈ ಹೋರಾಟದ ವೇಳೆ ಚಿಕಾಗೋದ ರಸ್ತೆಗಳಲ್ಲಿ ರಕ್ತದ ಓಕುಳಿ ನಡೆಯಿತು. 1889 ರಲ್ಲಿ ಅಂತರರಾಷ್ಟ್ರೀಯ ಶ್ರಮಜೀವಿ ವರ್ಗ ತನ್ನ ತುರ್ತು ಕೇಳಿಕೆಗಳ ಕಡೆಗೆ ಗಮನ ಸೆಳೆಯಲು ಈ ದಿನವನ್ನು ಆಚರಿಸಲು ನಿರ್ಧರಿಸಿತು.

ದಿನಗಳು ಕಳೆದಂತೆ ಕಾರ್ಮಿಕ ಸಮುದಾಯದ ಅಗತ್ಯಗಳು ಮತ್ತು ಕೇಳಿಕೆಗಳು ವ್ಯಾಪಕವಾಗುತ್ತಿವೆ ಹಾಗೂ ಬದಲಾಗುತ್ತಿವೆ. ಈಗ ಈ ದಿನವು ಶಾಂತಿ, ಮತ್ತು ಪ್ರಜಾಸತ್ತೆಗಾಗಿನ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಜಗತ್ತಿನ ಕಾರ್ಮಿಕ ಸಮುದಾಯದ ಐಕ್ಯಮತವನ್ನು ಸಂಕೇತಿಸುತ್ತಿದೆ.

1886 ರಲ್ಲಿ ಕೆಲವೇ ಕೆಲವು ಸಾವಿರ ಮಂದಿ ಕಾರ್ಮಿಕರು ತಮ್ಮ ಅಮೇರಿಕನ್ ಶೋಷಕರ ವಿರುದ್ಧ ಸಮರ ಹೂಡಿದ್ದರೆ, ಇಂದು ಜಗತ್ತಿನ ಸಮಸ್ತ ಶಾಂತಿಪ್ರಿಯ ಜನಸಮುದಾಯದವರು ಅಮೇರಿಕದ ವಿರುದ್ಧ ತಮ್ಮ ಉಳಿವಿಗಾಗಿ ಸಮರ ಸನ್ನದ್ಧರಾಗಿದ್ದಾರೆ.

ಈ ವರ್ಷ ಮೇ ದಿನದಂದು ಜಗತ್ತನ್ನು ನ್ಯೂಕ್ಲಿಯರ್ ಯುದ್ಧದ ಅಂಚಿಗೆ ದೂಡುತ್ತಿರುವ ಪ್ರಸಕ್ತ ಅಮೇರಿಕನ್ ಆಡಳಿತದ ವಿರುದ್ಧ ಜನ ಪ್ರತಿಭಟಿಸಲಿದ್ದಾರೆ. ತಮ್ಮ ಶಸ್ತ್ರಾಸ್ತ್ರ ಕೈಗಾರಿಕೆಯ ಮೂಲಕ ಭಾರಿ ಲಾಭ ಹೊಡೆಯುತ್ತಿರುವ ಮಂದಿ ಆಡಳಿತದ ಸಂಚುಕೂಟದಲ್ಲಿ ಬಲವಾಗಿ ಬೇರೂರಿದ್ದಾರೆ. ತಮ್ಮ ಸಾಮ್ರಾಜ್ಯಶಾಹಿ ಮಹತ್ವಾಕಾಂಕ್ಷೆಗಳೊಂದಿಗೆ ಅವರು ಜಗತ್ತನ್ನೇ ನಿಯಂತ್ರಣದಲ್ಲಿರಿಸಿಕೊಳ್ಳಲು ಹಾತೊರೆಯುತ್ತಿದ್ದಾರೆ.

ಇಂದಿನ ಪ್ರಧಾನ ಪ್ರಶ್ನೆಯೆಂದರೆ ಬದುಕಿ ಉಳಿಯುವುದು. ಅಂದರೆ ಭೂಮಿಯ ಮೇಲೆ ವಾಸವಾಗಿರುವ ಎಲ್ಲ ಜೀವಿಗಳ ಉಳಿವಿನ ಪ್ರಶ್ನೆ. ನ್ಯೂಕ್ಲಿಯರ್ ಯುದ್ಧ ಯಾರನ್ನೂ ಉಳಿಸುವುದಿಲ್ಲ, ಶಸ್ತ್ರಾಸ್ತ್ರಗಳನ್ನು ತಯಾರಿಸುವ ಮಂದಿಯನ್ನೂ ಅದು ಬಿಡುವುದಿಲ್ಲ. ಜಗತ್ತಿನ ಜನತೆ ಇದನ್ನು ಅರ್ಥ ಮಾಡಿಕೊಂಡಿದ್ದಾರೆ. ಈಗಾಗಲೇ ಮಿಲಿಯಗಟ್ಟಲೆ ಜನ, ಬಹುತೇಕ ಎಲ್ಲ ರಾಷ್ಟ್ರಗಳಲ್ಲೂ, ರೀಗನ್ ಆಡಳಿತದ ನ್ಯೂಕ್ಲಿಯರ್ ಶಸ್ತ್ರಾಸ್ತ್ರ ಜಮಾವಣೆ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಅದನ್ನು ತೀವ್ರಗೊಳಿಸುವುದೇ ಇಂದಿನ ಪ್ರಮುಖ ಕಾರ್ಯಭಾರವಾಗಿದೆ.

ಇನ್ನೂ ಕೂಡಾ ಜಗತ್ತಿನ ಅನೇಕ ಭಾಗಗಳಲ್ಲಿ ಮಿಲಿಟರಿ ಜುಂಟಾಗಳು ಮತ್ತು ಸರ್ವಾಧಿಕಾರಿ ಆಳ್ವಿಕೆಗಳಿಂದ ವಿಮೋಚನೆ ಪಡೆಯುವ ಹೋರಾಟಗಳು ಸಾಗುತ್ತಲೇ ಇದೆ, ಮಧ್ಯ ಅಮೇರಿಕಾ ಈಗ ಎಚ್ಚೆತ್ತಿದೆ. ಎಲ್ ಸಾಲ್ವಡೋರ್‌ನ ಜನತೆ ತಮ್ಮ ವಿಮೋಚನೆಗಾಗಿ ರಕ್ತ ಹರಿಸುತ್ತಿದ್ದರೆ, ನಿಕಾರಾಗುವಾ ಜನತೆ ಕಠಿಣ ಶ್ರಮದಿಂದ ಸಂಪಾದಿಸಿದ ತಮ್ಮ ಸ್ವಾತಂತ್ರ್ಯದ ರಕ್ಷಣೆಗಾಗಿ ಹೋರಾಡುತ್ತಿರುವರು. ತಮ್ಮ ತಾಯ್ನಾಡಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ತೀನಿಯರ ಚಳುವಳಿಗೂ ಉತ್ತರ ದೊರೆತಿಲ್ಲ. ಅಪಾರ್ಥೀಡ್‌ನ ಭೂತದಿಂದ ಬಿಡುಗಡೆ ಹೊಂದುವ ಸಲುವಾಗಿ ದಕ್ಷಿಣ ಆಫ್ರಿಕಾ ಜನತೆ ನಡೆಸುತ್ತಿರುವ ಹಾಗೂ ದಕ್ಷಿಣ ಆಫ್ರಿಕಾದಿಂದ ವಿಮೋಚನೆ ಹೊಂದಲು ನಮೀಬಿಯನರು ನಡೆಸುತ್ತಿರುವ ಹೋರಾಟಗಳೂ ಸಾಗಿವೆ.

(8ನೇ ಪುಟ ನೋಡಿ)

ಯುವಜನ ವೇದಿಕೆ

ಮಂಗಳೂರು

ಜಾಗತಿಕ ಶಾಂತಿಗಾಗಿ ಮಾತ್ರವಲ್ಲ ಮಾನವ ಜನಾಂಗದ ಉಳಿವಿಗಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯನ್ನು ವಿರೋಧಿಸ ಬೇಕಲ್ಲದೆ ಈ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಉಂಟು ಮಾಡಿ "ಶಾಂತಿ ಚಳವಳಿ"ಯಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ದ.ಕ. ಜಿಲ್ಲಾ ಸಿಐಟಿಯು ಉಪಾಧ್ಯಕ್ಷರಾದ ಕಾ. ಬಿ. ಮಾಧವ- ವಿದ್ಯಾರ್ಥಿ ಯುವಜನರಿಗೆ ಕರೆ ನೀಡಿದರು. ಅವರು 13-4-84 ರಂದು ಎಸ್.ಎಫ್.ಐ., ಡಿ.ವೈ.ಎಫ್.ಐ., ಎ.ಐ.ವೈ.ಎಫ್., ಯೂತ್ ಜನತಾ ದವರು ಜಂಟಿಯಾಗಿ ಏರ್ಪಡಿಸಿದ "ಶಾಂತಿದಿನಾಚರಣೆ" ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಯುರೋಪಿನಲ್ಲಿ ನ್ಯಾಟೋ ಬಣದವರು ಕ್ಷಿಪಣಿಗಳನ್ನು ಸ್ಥಾಪಿಸಿ ಸಮಾಜವಾದಿ ವ್ಯವಸ್ಥೆಯನ್ನು ನಾಶ ಮಾಡುವತ್ತ ಮುನ್ನುಗ್ಗುವುದನ್ನು ತಡೆಯಲು ಜನ ಶಕ್ತಿಯಿಂದ ಸಾಧ್ಯವಾಗಿರುವುದರಿಂದ ಭಾರತ ದೇಶದಲ್ಲೂ ಶಾಂತಿ ಚಳವಳಿ" ಯನ್ನು ತೀವ್ರಗೊಳಿಸಬೇಕೆಂದು ಹೇಳಿದರು. ಭಾರತ ದೇಶದ ಸರ್ಕಾರ ಸಾಮ್ರಾಜ್ಯಶಾಹಿ ಅಮೇರಿಕಾ ಮತ್ತು ಸಮಾಜವಾದೀ ರಷ್ಯವನ್ನು ಒಂದೇ ತಕ್ಕಡಿಯಲ್ಲಿ ತೂಗಿ ಎರಡು "ಬೃಹತ್ ಶಕ್ತಿ" ಎಂದು ಹೇಳುತ್ತಿರುವ ಧೋರಣೆ ಯನ್ನು ಟೀಕಿಸಿದ ಎ.ಐ.ಟಿ.ಯು.ಸಿ. ಅಧ್ಯಕ್ಷರಾದ ಉಮಾನಾಥನಾಯ್ಕ ರವರು ಈ ತಪ್ಪು ಧೋರಣೆ ಬಗ್ಗೆಯೂ ದೇಶಾದ್ಯಂತ ಜನರಲ್ಲಿ ಪ್ರಜ್ಞೆ ಮೂಡಿ ಸಬೇಕೆಂದು ಹೇಳಿದರು.

ಎಸ್. ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್ ಮಾತನಾ ಡುತ್ತಾ ಕಾರ್ಮಿಕರು, ರೈತರು ತಮ್ಮ ದಿನ ನಿತ್ಯದ ಸಮಸ್ಯೆಗಳಿಗಾಗಿ ಹೋರಾ ಡುವುದರೊಂದಿಗೆ ಮಾನವ ಕುಲದ ಉಳಿವಿಗಾಗಿ ಶಾಂತಿ ಚಳುವಳಿಯ ಮುಂಚೂಣಿಯಲ್ಲಿರಬೇಕೆಂದು ಅಭಿ ಪ್ರಾಯಪಟ್ಟರು.

ನೆರೆ ದೇಶವಾದ ಪಾಕಿಸ್ತಾನಕ್ಕೆ ಕೋಟ್ಯಾಂತರ ರೂಪಾಯಿಗಳ ಶಸ್ತ್ರಾಸ್ತ್ರ ವನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಗಳು ಸರಬರಾಜು ಮಾಡುತ್ತಿರುವುದ ಲ್ಲದೆ ಡಿಯೇಗಾರ್ಸಿಯ ದ್ವೀಪಗಳಲ್ಲಿ ತನ್ನ ಮಿಲಿಟರಿ ನೆಲೆಯನ್ನು ಸ್ಥಾಪಿಸ ಲಾಗಿದೆ ಎಂದು ಹೇಳಿದ ಅವರು ಶ್ರೀಲಂಕಾದ ಟ್ರಿಂಕೋಮಲೆ, ಬಂಗ್ಲಾದ ಚಿತ್ತಾಗಾಂಗ್‌ನಲ್ಲೂ ಮಿಲಿಟರಿ ನೆಲೆ ಯನ್ನು ಸ್ಥಾಪಿಸಲು ಪ್ರಯತ್ನಿಸುವ ಮೂಲಕ ನಮ್ಮ ದೇಶದ ಸುತ್ತ ಮುತ್ತಲೂ ಯುದ್ಧದ ಕಾರ್ಮೋಡವನ್ನ ನಿರ್ಮಿಸಿದ್ದಾರೆ ಎಂದು ಹೇಳಿದರು. ಡಿ.ವೈ.ಎಫ್.ಐ. ಕಾರ್ಯದರ್ಶಿ ಶಿವಾನಂದ ಕೋಡಿಯವರು ಮಾತನಾ ಡುತ್ತಾ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಏಪ್ರಿಲ್ 13 ರಂದು ನಡೆದ ಜಲಿಯನ್‌ವಾಲಬಾಗ್ ದಿನವನ್ನು ನೆನಪಿಸಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧಕೋರ ನೀತಿಯ ವಿರುದ್ಧ ಅಮೇರಿಕಾದಲ್ಲೂ ಜನಸಾಮಾನ್ಯರು ಶಾಂತಿ ಚಳವಳಿಯಲ್ಲಿ ಭಾಗವಹಿಸುತ್ತಿರುವುದನ್ನು ನೆನಪಿಸಿ ದರು.

ಯುವ ಜನತಾದ ಕಾರ್ಯದರ್ಶಿ ಅನಿಲ್‌ಪ್ರಸಾದ್ ಹೆಗ್ಡೆಯವರು ಶಾಂತಿ ಚಳವಳಿಯನ್ನು ಬೆಂಬಲಿಸಿ ಮಾತನಾಡಿದರು. 1984 ಮಾರ್ಚ್ 8 ಮತ್ತು 9 ರಂದು ನವದೆಹಲಿಯಲ್ಲಿ 8 ಎಡ ಮತ್ತು ಪ್ರಜಾ ಪ್ರಭುತ್ವವಾದಿ ಪಕ್ಷಗಳು ಜಂಟಿಯಾಗಿ ಸಂಘಟಿಸಿದ್ದ ರಾಷ್ಟ್ರಮಟ್ಟದ "ಶಾಂತಿ ಸಮಾವೇಶ"ದ ಕರೆಯಂತೆ ಏಪ್ರಿಲ್ 13 ರಂದುಶಾಂತಿ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ ಯುವಜನರು ಸಭೆ ಯಲ್ಲಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಯು. ಶಂಭು ಅವರು ಸ್ವಾಗತಿಸಿದರು ಕೊನೆಗೆ ಬಿ. ಸುದಾನಂದ ವಂದಿಸಿದರು.

ಸುಳ್ಯ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಸಂಘಟನೆಯ ಸಭೆಯು ಏಪ್ರಿಲ್ 8 ರಂದು ಕಂದಡ್ಕದಲ್ಲಿ ನಡೆಯಿತು. ಸುಳ್ಯ ತಾಲ್ಲೂಕು ಸಮಿತಿ ಸಂಚಾಲಕ ರಾದ ಕಾ। ಪಿ ಕೆ. ಮೂಸರವರು ಯುವಜನರು ಈ ಸಮಾಜವನ್ನು ಬದಲಾಯಿಸಿ, ಒಂದು ವರ್ಗರಹಿತ ಸಮಾಜವನ್ನು ಕಟ್ಟಲು ಈಗಲೇ ಸಂಘಟಿತರಾಗಬೇಕು ಮತ್ತು ಯುವಕರು ಇಂದು ತಪ್ಪು ದಾರಿಗೆ ಹೋಗುತ್ತಾರೆ. ಅವರನ್ನು ಸರಿದಾರಿಗೆ ತರಲು ಡಿ. ವೈ. ಎಫ್. ಐ. ಮುಂದಾಗಬೇಕು ಎಂದರು. ತಾಲ್ಲೂಕು ರೈತಸಂಘ ಕಾರ್ಯದರ್ಶಿ ಭಾಸ್ಕರರಾವ್ ಮಾತನಾ ಡುತ್ತಾ "ಯುವ ಜನರು ಇಂದಿನ ಸಮಾಜದಲ್ಲಿರುವ ಯುವಜನರ ಸಮಸ್ಯೆ ಗಾಗಿ ಹೋರಾಡುವುದು ಅನಿವಾರ್ಯ. ಅದರೊಂದಿಗೆ ರಾಜಕೀಯವನ್ನು ಅರ್ಥ ಮಾಡಿಕೊಳ್ಳಬೇಕು. ಇಂದಿನ ಕೊಳಕಾದ ಸಾಮಾಜಿಕ ಪರಿಸ್ಥಿತಿಯನ್ನು ಜಾತಿ ಧರ್ಮದ ಮುಳ್ಳನ್ನು ಕಿತ್ತೊಗೆಯಬೇಕು" ಎಂದರು. ಸಭೆಯಲ್ಲಿ ಕೆಳಕಂಡ ಸಮಿತಿಯನ್ನು ರಚಿಸಲಾ ಯಿತು.

ಅಧ್ಯಕ್ಷರಾಗಿ ಕಾ. ದ್ವಾರಕನಾಥರು ಉಪಾಧ್ಯಕ್ಷರಾಗಿ ಕಾ. ಡಿ. ಬಾಲಕೃಷ್ಣ ಪ್ರಧಾನ ಕಾರ್ಯದರ್ಶಿಯಾಗಿ ಬಿ. ಸೀತಾರಾಂ, ಉಪಕಾರ್ಯದರ್ಶಿಯಾಗಿ ಯನ್. ಚಾಮಯ್ಯನವರೂ ಸದಸ್ಯರಾಗಿ ಕಾ. ರಾಮಕೃಷ್ಣ ಕಾ. ನಾರಾಯಣ, ಕಾ ಬಾಬು, ಕಾ.ಬಾಲ ಸುಬ್ರಹ್ಮಣ್ಯ, ಕಾ. ಭಾಸ್ಕರರಾವ್ ಇವರು ಆಯ್ಕೆಯಾದರು. ಮತ್ತು 1984ರ ಸದಸ್ಯತನ ಮಾಡಲು ಸಭೆಯು ನಿರ್ಧರಿಸಿತು. ಕೊನೆಗೆ ಡಿ. ಬಾಲಕೃಷ್ಣನವರು ಧನ್ಯವಾದ ಕೋರಿದರು.

ಕುಂದಾಪುರ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್‌ನ ಎರಡನೇಯ ರಾಷ್ಟ್ರೀಯ ಸಮ್ಮೇಳನದಲ್ಲಿ ತೆಗೆದು ಕೊಂಡ ನಿರ್ಣಯದ ಪ್ರಕಾರ "ಮಾರ್ಚ್ 28 ರ ನಿರುದ್ಯೋಗ ವಿರೋಧಿ ದಿನಾಚರಣೆ"ಯ ಅಂಗ ವಾಗಿ ಕುಂದಾಪುರದ ಡಿ.ವೈ.ಎಫ್.ಐ ತಾಲ್ಲೂಕು ಸಮಿತಿಯು ಸಪ್ತಾಹವನ್ನು ನಡೆಸಿತು.

ಮಾರ್ಚ್ 23 ರಂದು ಕೋಟೇಶ್ವರ ದಲ್ಲಿ "ಭಗತ್‌ಸಿಂಗ್ ದಿನಾಚರಣೆ"ಯ ಅಂಗವಾಗಿ "ಸ್ವಾತಂತ್ರ್ಯ ಹೋರಾಟ ದಲ್ಲಿ ಭಗತ್‌ಸಿಂಗ್ ಮತ್ತು ಯುವ ಜನರ ಪಾತ್ರ" ಎನ್ನುವ ವಿಷಯದ ಬಗ್ಗೆ ಕೋಟದ ವಿವೇಕ ಜೂನಿಯರ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಕೊ ರಾಮಚಂದ್ರ ಉಡುಪರವರು ಮಾತನಾಡಿ ಸ್ವಾತಂತ್ರ್ಯ ಹೋರಾಟ ದಲ್ಲಿ ಕ್ರಾಂತಿಕಾರಿವಿಚಾರಧಾರೆ ಮೂಡಿ ಬರಲು ರಷ್ಯದ ಕ್ರಾಂತಿ ಯಾವರೀತಿ ಪರಿಣಾಮ ಬೀರಿತೆಂದು ಹೇಳಿ ಅದರ ಫಲವಾಗಿಯೇ ಭಗತ್‌ಸಿಂಗ್‌ರಂಥ ಯುವಕರು ರಾಷ್ಟ್ರದ ಸ್ವಾತಂತ್ರ್ಯ ಕ್ಕಾಗಿ ಗಲ್ಲಿಗೇರಲು ತಯಾರಾದ ರೆಂಬ ಅಂಶವನ್ನು ವಿವರಿಸಿ ಈಗಿನ ಪೀಳಿಗೆ ಕೂಡ ಸಮಾಜದಲ್ಲಿ ಕ್ರಾಂತಿ ತರಲು ಮುಂದಾಗಬೇಕೆಂದರು.

ತಾ. 24 ರಂದು "ಸಾಮ್ರಾಜ್ಯ ಶಾಹಿ ಯುದ್ಧ ವಿರೋಧಿ ದಿನಾಚರ ಣೆ"ಯ ಅಂಗವಾಗಿ ಕೋಟೇಶ್ವರದಿಂದ ಕುಂದಾಪುರದ ವರೆಗೆ ರಾತ್ರಿ ನಡೆಸಿದ ಪಂಜಿನ ಮೆರವಣಿಗೆಯು ಕುಂದಾಪುರ ಪೇಟೆಯ ಜನರು ಕುತೂಹಲದಿಂದ ನೋಡುವಂತೆ ಮಾಡಿತು. ಅದೇ ದಿನ ಸಾಮ್ರಾಜ್ಯಶಾಹಿ ಅಮೇರಿಕದ ಅಧ್ಯಕ್ಷ ರೊನಾಲ್ಡ್ ರೇಗನ್‌ರ ಪ್ರತಿಕೃತಿ ಯನ್ನು ದಹನ ಮಾಡಿದ್ದು ಜನರ ಉತ್ತಮ ಪ್ರತಿಕ್ರಿಯೆಗೆ ಅವಕಾಶ ಮಾಡಿಕೊಟ್ಟಿತು. ಈ ದೃಶ್ಯವನ್ನು ಒಂದು ಸಾವಿರಕ್ಕೂ ಹೆಚ್ಚು ಜನರು ವೀಕ್ಷಿಸಿದ್ದು ಮಹತ್ವದ್ದು.

ತಾ. 25 ರಂದು "ರಾಷ್ಟ್ರೀಯ ಐಕ್ಯತಾ ದಿನಾಚರಣೆ"ಯು ಡಿ.ವೈ. ಎಫ್. ಐ. ಸದಸ್ಯರು ಕುಂದಾಪುರದಿಂದ ಸಾಲಿಗ್ರಾಮದ ವರೆಗೆ ನಡೆಸಿದ ಸೈಕಲ್ ರ್‍ಯಾಲಿಯೊಂದಿಗೆ ಯಶಸ್ವಿಯಾಗಿ ನಡೆ ಯಿತು.

ತಾ. 28 ರಂದು "ನಿರುದ್ಯೋಗ ವಿರೋಧಿ ದಿನಾಚರಣೆ"ಯ ಅಂಗವಾಗಿ ಬೃಹತ್ ಯುವಜನರ ಮೆರವಣಿಗೆ ನಡೆ ಯಿತು. ಕೊನೆಯಲ್ಲಿ ಕುಂದಾಪುರದ ಶಾಸ್ತ್ರಿ ಸರ್ಕಲಿನ ಬಳಿ ಯುವಜನ ಮುಖಂಡರು ಭಾಷಣ ಮಾಡಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿ ಸಿದ ಶ್ರೀಯುತ ಬಿ ಕೆ. ಶೆಟ್ಟಿ, ಡಿ.ವೈ. ಎಫ್. ಐ. ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಮಂಜಾಬಲ ವಡೇರಹೋಬ್ಳಿ ಕಾ. ಶಂಕರ ಖಾರ್ವಿಯವರು ಸಭೆ ಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಚ್. ನರಸಿಂಹನವರು ವಹಿಸಿದ್ದರು. ಕಾ. ಗಣಪು ಬಂಗೇರರು ಧನ್ಯವಾದ ಅರ್ಪಿಸಿದರು.

ಕೋಲಾರ

ಮಾರ್ಚ್ 20 ರಿಂದ 28 ರವರೆಗೆ ಡಿವೈಎಫ್ಐ ಜನ ಜಾಗೃತಿ ಆಂದೋಳನದ "ಟೆಂಪೋ ಜಾಥಾ" ಇಡೀ ಕೋಲಾರ ಜಿಲ್ಲೆಯಾದ್ಯಂತ ಜನರಲ್ಲಿ ಜಾಗೃತಿ ಉಂಟು ಮಾಡುವಲ್ಲಿ ಯಶಸ್ವಿ ಯಾಗಿದೆ.

ಸುಮಾರು 50,000 ಜನರೊಂದಿಗೆ ಸಂಪರ್ಕ ಬೆಳೆಸಿ,-ಇಂದಿನ ಜ್ವಲಂತ ಸಮಸ್ಯೆಗಳ ಬಗ್ಗೆ ವಿವರಣೆ ನೀಡಿ ಹೋರಾಟ ಮಾಡಲು ಕರೆಕೊಟ್ಟಿತು. ಇಡೀ ಜಿಲ್ಲೆಯಲ್ಲಿ 300 ಹಳ್ಳಿ ಮತ್ತು ಪಟ್ಟಣಗಳನ್ನು ಸಂಪರ್ಕಿಸಿ ಪ್ರಚಾರ ಮಾಡಿ ಸುಮಾರು 84 ಬಹಿರಂಗ ಸಭೆ ಗಳನ್ನು ನಡೆಸಿದೆ. ಜಾಥಾದಲ್ಲಿ ಒಟ್ಟಾರೆ 25 ಜನ ಕಾರ್ಯಕರ್ತರಿದ್ದು ಸಾಂಸ್ಕೃತಿಕ ತಂಡವು ನೀಡಿದ ಹಾಡು ಗಳು ಪರಿಣಾಮಕಾರಿಯಾಗಿದ್ದವು ಜಾಥಾದಲ್ಲಿ 500 ಸದಸ್ಯತ್ವವನ್ನು ನೊಂದಾಯಿಸಿದ್ದಲ್ಲದೆ 1000 ಬ್ಯಾಡ್ಜ ಗಳನ್ನು ಹಾಗೂ 500 ಡಿ.ವೈ.ಎಫ್. ಐ.ನ ಕಾರ್ಯಕ್ರಮ ಪುಸ್ತಕಗಳನ್ನು ಮಾರಾಟ ಮಾಡಲಾಯಿತು. 40,000 ಕರಪತ್ರಗಳನ್ನು ಹಂಚಲಾಯಿತು.

ಮುಖ್ಯವಾಗಿ ಜನಜಾಗೃತಿ ಆಂದೋಳನ ಯಶಸ್ವಿಯಾಗಲು ಎಲ್ಲಾ ಕಡೆಗಳಲ್ಲೂ ರೈತ, ಕಾರ್ಮಿಕ ವಿದ್ಯಾರ್ಥಿ ಯುವಜನ ಬಂಧುಗಳು ಆದರ ಸುಸ್ವಾಗತ ನೀಡಿ ಸಂಪೂರ್ಣ ಸಹಕಾರ ಕೊಟ್ಟಿರುತ್ತಾರೆ.

ಬೆಂಗಳೂರು

ಏಪ್ರಿಲ್ 23 ರಂದು ಚಾಮರಾಜ ಪೇಟೆಯಲ್ಲಿ ಭಗತ್‌ಸಿಂಗ್ ದಿನಾಚರಣೆ ಯೊಂದಿಗೆ ಚಾಮರಾಜಪೇಟೆಯ ಘಟಕ ವನ್ನು ಉದ್ಘಾಟಿಸಲಾಯಿತು. ಮುಖ್ಯ ಅತಿಥಿಯಾಗಿ ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ಹಾಗೂ ಎಸ್. ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ ಎಸ್. ಆರ್. ಆರಾಧ್ಯ ರವರುಗಳು ಡಿವೈಎಫ್ಐನ ಧ್ಯೇಯೋದ್ದೇಶಗಳು ಹಾಗೂ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಸ್ವಾತಂತ್ರ ಹೋರಾಟದಲ್ಲಿ ಭಗತ್‌ಸಿಂಗ್‌ರವರ ಪಾತ್ರ ಮುಂತಾಗಿ ವಿವರಿಸಿದರು. ನಂತರ ಚಾಮರಾಜ ಪೇಟೆ ಘಟಕವನ್ನು ರಚಿಸಲಾಯಿತು. 20 ಸದಸ್ಯರುಳ್ಳ ಸಮಿತಿಗೆ ಸಂಚಾಲಕ ರಾಗಿ ಕಾ. ಶಿವಶಂಕರ್, ಕಾ. ರತ್ನ ರವರುಗಳನ್ನು ಆರಿಸಲಾಯಿತು.

(8ನೇ ಪುಟ ನೋಡಿ)

(5ನೇ ಪುಟದಿಂದ)

ತೆಯ ಆನಂದ ಹಾಗೂ ನೈಪುಣ್ಯ, ಹಾಡು ಹಾಗೂ ಸಂಗೀತಗಳಲ್ಲಿ ಅವರ ಪ್ರೇಮ ಹಾಗೂ ರಂಗಸಜ್ಜಿಕೆಯಲ್ಲಿ ಅವರ ಕಲಾತ್ಮಕತೆಯನ್ನು ನಾವು ಹೇರಳವಾಗಿ ಕಂಡೆವು.

ಎರಡು ಸಂಗತಿಗಳು ನನ್ನನ್ನು ಧ್ಯಾನಾಕರ್ಷಿಸಿದವು. ಒಂದು ಅವರ ನೃತ್ಯ ಹಾಗೂ ನೃತ್ಯವಿನ್ಯಾಸ (Choreography) ಯೂರೋಪಿ ಯನ್ ಶೈಲಿಗಳಿಗಿಂತ ನಮ್ಮ ಮಣಿ ಪುರಿ ಮತ್ತು ಶಾಂತಿನಿಕೇತನದ ಶೈಲಿ ಗಳಿಗೆ ಹತ್ತಿರವಾಗಿದ್ದವು. ಎರಡನೆ ಯದಾಗಿ, ಬ್ಯಾಲೆನೃತ್ಯದಲ್ಲಿ ಅವರ ಪುರುಷ ಹಾಗೂ ಸ್ತ್ರೀ ನೃತ್ಯಗಾರರು ಧರಿಸಿದ್ದ ವೇಷಗಳು ಬಂಗಾಲ ಕಲಾ ಕಾರ ನಂದಲಾಲ ಬೋಸ ಅವರು ಟ್ಯಾಗೋರರ ಚಿತ್ರಾಂಗದ ಮತ್ತು ಶ್ಯಾಮಾ ಮೊದಲಾದ ಬ್ಯಾಲೆಗಳಲ್ಲಿ ಪರಿಚಯಿಸಿದ್ದ ವೇಷಗಳಂತೆಯೇ ಇದ್ದವು.

ನನ್ನಷ್ಟಕ್ಕೆ ನಾನೇ ಅಂದುಕೊಂಡೆ, ನಾವು ಏಶಿಯನ್ನರು ಅದೆಷ್ಟು ಒಂದು ಬಗೆಯವರಾಗಿದ್ದೇವೆ ! ಒಂದು ಕಾಲಕ್ಕೆ ಭಾರತ ಮತ್ತು ಚೀನಗಳು ಸಾಂಸ್ಕೃತಿಕವಾಗಿ ಪರಸ್ಪರ ಸಮೀಪ ವಾಗಿದ್ದಿರಬೇಕು, ಪರಸ್ಪರರಿಂದ ಕಲಿತುಕೊಂಡಿರಬೇಕು ಹಾಗೂ ಉಭ ಯರೂ ತನ್ಮೂಲಕ ಶ್ರೀಮಂತಗೊಂಡಿರ ಬೇಕು.

ಕೊನೆಗೆ ನಾವು ಕ್ಯಾಂಟನ್‌ಗೆ ಬೀಳ್ಕೊಟ್ಟೆವು. ವಿಮಾನದಲ್ಲಿ ಕಾಲಿಡು ತ್ತಿದ್ದಂತೆಯೇ, ಗೀತಾಂಜಲಿಯಲ್ಲಿಯ ಪ್ರಸಿದ್ಧ ಪದ್ಯವೊಂದನ್ನು ನಾನು ನೆನಪಿ ಸಿಕೊಂಡೆ "ನಾನಿಲ್ಲಿಂದ ಮರಳಿ ಹೋಗುವಾಗ ನನ್ನ ವಿದಾಯದ ಶಬ್ದ ಗಳು ಇವಾಗಿರಲಿ-ನಾನಿಲ್ಲಿ ಕಂಡದ್ದಕ್ಕೆ ಸರಿಸಾಟಿ ಯಾವುದೂ ಇಲ್ಲ."

(2ನೇ ಪುಟದಿಂದ)

ಇಂಥ ಪರಿಸ್ಥಿತಿಯಲ್ಲಿ ಮಾರ್ಕ್ಸವಾದಿ ಕಮ್ಯುನಿಸ್ಟ್‌ಪಾರ್ಟಿ ಮತ್ತು ಎಡ ವಿಚಾರದ ತರುಣರೆಲ್ಲಒಂದಾಗಿ ಚಂದ್ರಾ ವತಿ ಹತ್ಯೆಯ ಪ್ರತಿಭಟನಾ ಸಮಿತಿ ಯೊಂದನ್ನು ರಚಿಸಿ,ಜನಜಾಗೃತಿಉಂಟು ಮಾಡಲು ಹೊರಟಿರುವುದು, ಹಾಗೆಯೇ ಹತ್ಯೆಯನ್ನು ಖಂಡಿಸಿ, ಕೊಲೆಗಡುಕರಿಗೆ ಕಠಿಣ ಶಿಕ್ಷೆಯಾಗ ಬೇಕೆಂದು ಹೋರಾಡುತ್ತಿರುವುದು ಪ್ರಶಂಸನೀಯ. ಏಪ್ರಿಲ್ 12 ರಂದು ಜಾಲಿಹಾಳ ಕ್ಯಾಂಪಿನಿಂದ ಕಾಲ್ಜಾಥಾ ಹೊರಡಿಸಿ, ತಲೆತಪ್ಪಿಸಿಕೊಂಡಿರುವ ಅಪಾದಿತರನ್ನು ಬಂಧಿಸಲು ಒತ್ತಾಯಿಸ ಲಾಯಿತು. ಯುವಕರ ಈ ಕ್ರಮಕ್ಕೆ ಐಕ್ಯರಂಗ ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಸಂಸತ್ ಭವನದ ಮುಂದೆ ದುಡಿಯುವ ಜನತೆಯ ಪ್ರದರ್ಶನ

ಏಪ್ರಿಲ್ 18 ರಂದು ದಿಲ್ಲಿ ಜನರು ಅಪೂರ್ವ ಪ್ರದರ್ಶನ ಒಂದನ್ನು ಕಂಡು ಹೊಸ ಸ್ಫೂರ್ತಿ ಪಡೆದರು. ಪಂಜಾಬ್ ಹರಿಯಾಣಗಳಲ್ಲಿ ನಿರಪರಾಧಿಗಳ ಕೊಲೆ-ಸುಲಿಗೆ ನಡೆಯುತ್ತಿರುವಾಗ, ದೈನಂದಿನ ಜೀವನವೇ ಇಲ್ಲದಾಗಿರುವಾಗ, ಕೇಂದ್ರದಲ್ಲಿ ಆಡಳಿತ ನಡೆಸುವ ಇಂದಿರಾಗಾಂಧಿ ಆ ರಾಜ್ಯಗಳಲ್ಲಿ ವಿಚ್ಛಿದ್ರಕಾರಿ ಶಕ್ತಿಗಳಿಗೆ ಬೆಂಬಲಕೊಟ್ಟು ಇನ್ನೂ ಹೆಚ್ಚು ಅಶಾಂತಿಗೆ ಎಡೆಕೊಡುತ್ತಿರುವಾಗ, ಜಮ್ಮು-ಕಾಶ್ಮೀರ, ಪಂಜಾಬ್-ಹರಿಯಾಣ ಹಾಗೆಯೇ ದೇಶದ ಮೂಲೆ ಮೂಲೆಗಳಿಂದ ದುಡಿಯುವ ಕಾರ್ಮಿಕವರ್ಗ ಜಾತಿ, ಮತ, ಭೇದಗಳಿಲ್ಲದೆ ಕೆಂಪು ಕೋಟೆಯ ಹಿಂಬದಿಯ ವಿಶಾಲವಾದ ಮೈದಾನದಲ್ಲಿ ಸೇರಿ ತಮ್ಮ ಬೇಡಿಕೆಗಳ ಸಲುವಾಗಿಯೂ, ದೇಶದ ಐಕ್ಯತೆಗಾಗಿಯೂ, ಛಿದ್ರಕಾರಿ ಶಕ್ತಿಗಳ ವಿರುದ್ಧವೂ ಘೋಷಣೆ ಕೂಗುತ್ತಿರುವುದೊಂದು ಜನತೆಗೆ ಹೊಸ ದೃಷ್ಟಿಕೋನವನ್ನೂ, ದೃಶ್ಯವನ್ನೂ ತೋರ್ಪಡಿಸಿದಂತಾಯಿತು. ಕಾರ್ಮಿಕವರ್ಗ ತನ್ನ ಆರ್ಥಿಕ ಬೇಡಿಕೆಗಳ ಸಲುವಾಗಿಯಷ್ಟೇ ಅಲ್ಲ ದೇಶದ ಸಾರ್ವಭೌಮತ್ವದ, ದೇಶದ ವಿಭಜನೆಯ ಅಪಾಯದ ಚಿಂತನೆ ಮಾಡುತ್ತದೆಂಬುದನ್ನು ಆ ಪ್ರದರ್ಶನ ತೋರಿಸಿ ಕೊಟ್ಟಿತ್ತು.

ದೇಶದ ನಾನಾ ಭಾಗಗಳಿಂದ ಬಂದು ನೆರೆದಿದ್ದ ಒಂದು ಲಕ್ಷಕ್ಕೂ ಮೇಲ್ಪಟ್ಟ ಕಾರ್ಮಿಕರೆಲ್ಲ ಘೋಷಣೆ ಮಾಡುತ್ತ ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ದಿಲ್ಲಿ ಸುತ್ತಾಡಿ ಲೋಕ ಸಭೆಯ ಮುಂದಿರುವ ಬೋಟ್‌ಕ್ಲಬ್ಬಿನಲ್ಲಿ ಬಂದು ನೆರೆದಾಗ ಕೆಂಪು ಪತಾಕೆಗಳು ಹಾರಾಡುತ್ತಿರುವ ಜನಸಮೂಹದ ದೃಶ್ಯ ಹೃದಯಂಗಮವಾಗಿತ್ತು. ಒಂದು ಲಕ್ಷದ ಎಂಬತ್ತು ಸಾವಿರದಷ್ಟು ಕೆಂಪು ಪತಾಕೆಗಳೇ, 84 ದಿವಸದ ಮುಷ್ಕರ ನಡೆಸಿದ ಜ್ಯೂಟ (ನಾರು) ಕೆಲಸಗಾರರು, 35 ದಿವಸ ಸಂಪು ಹೂಡಿದ ಬಂದರು ಕೆಲಸಗಾರರು, ಹಲವಾರು ಹೋರಾಟಗಳನ್ನು ನಡೆಸಿದ್ದ ಕಲ್ಲಿದ್ದಲು, ಉಕ್ಕು, ಬಟ್ಟೆ ಗಿರಣಿ, ಕಾಫಿ, ಚಹಾ, ರಬ್ಬರ್, ತೋಟಗಳ ಕಾರ್ಮಿಕರು, ಕರ್ನಾಟಕದ ಹರಿಹರ ಕಿರ್ಲೋಸ್ಕರ್, ಫಾಲಿಫೈಬರ್, ಚಿನ್ನದಗಣಿ, ಕಾಫಿ ತೋಟ, ಭದ್ರಾವತಿ ಉಕ್ಕು, ಮೈಕೋ, ಬಿಇಎಲ್, ಹಾಗೆಯೇ ಮೈಸೂರ್‌ರೋಡ್ ಕೃಷ್ಣರಾಜಪುರದ ಚಿಕ್ಕ ಕಾರ್ಖಾನೆಗಳಲ್ಲಿ ಹೋರಾಡುತ್ತಿರುವ ಕಾರ್ಮಿಕರು, ಸಾವಿರಾರು ಮಹಿಳೆಯರು, ಅಲ್ಲದೇ ಕೃಷಿ ಕೂಲಿಗಾರರು-ಹೀಗೆ ಪ್ರತಿಯೊಂದು ಉದ್ಯಮದಲ್ಲಿ ದುಡಿಯುವ ಕಾರ್ಮಿಕರೆಲ್ಲ ಕೆಂಬಾವುಟವನ್ನು ಎತ್ತಿ ಹಿಡಿದು ಮತ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿಯ ಆದೇಶದಂತೆ ಈ ಮೋರ್ಚಾ ಏರ್ಪಡಿಸಲಾಗಿತ್ತು.

ಬೋಟ್‌ಕ್ಲಬ್ಬಿನಲ್ಲಿ ಸೇರಿದ ಬೃಹತ್ ಮತಪ್ರದರ್ಶನವು, ರಾಷ್ಟ್ರೀಯ ಆಂದೋಲನ ಸಮಿತಿಯ ನೇತೃತ್ವದಲ್ಲಿ ದೇಶದ ಕಾರ್ಮಿಕ ವರ್ಗ ಮತ್ತು ದುಡಿಯುವ ಜನತೆ ತಮ್ಮ ಬೇಡಿಕೆಗಳ ಸಲುವಾಗಿ ಮತ್ತು ಕಾರ್ಮಿಕ ಸಂಘಟನೆಯ ಹಕ್ಕಿಗಾಗಿ ಐಕ್ಯ ಹೋರಾಟ ನಡೆಸಿದ್ದಕ್ಕೆ ತನ್ನ ಅಭಿನಂದನೆಗಳನ್ನು ಸಲ್ಲಿಸಿತು.

ಸಾರ್ವಜನಿಕ ಕ್ಷೇತ್ರದ, ಜ್ಯೂಟ ಮತ್ತು ಬಂದರು ಕೆಲಸಗಾರರು ಐ. ಎನ್. ಟಿ. ಯು. ಸಿ. ಯನ್ನೊಳಗೊಂಡು ಯಶಸ್ವಿಹೋರಾಟ ನಡೆಸಿದ್ದಕ್ಕಾಗಿಯೂ ಅಭಿನಂದಿಸಲ್ಪಟ್ಟರು.

ಭಾರತ ಸರಕಾರದ ಗುತ್ತೇದಾರಿ ಮತ್ತು ಭೂ-ಮಾಲಕರ ಪರ ನೀತಿಯಿಂದಾಗಿ ಉಂಟಾಗಿರುವ ಆರ್ಥಿಕ ಬಿಕ್ಕಟ್ಟಿಗೆ ದುಡಿಯುವ ಜನತೆ ಬಲಿಯಾಗುತ್ತಿದ್ದಾರೆಂದೂ ಜಗತ್ತಿನಾದ್ಯಂತ ಉದ್ಭವಿಸಿರುವ ಹಿಂಬಡತಿ ಕಾರ್ಮಿಕರ ಸಂಕಷ್ಟವನ್ನು ಮತ್ತಷ್ಟು ಕ್ಲಿಷ್ಟವಾಗಿಸಿದೆಯೆಂದೂ, ಏರುತ್ತಿರುವ ಬೆಲೆ ಬೆನ್ನು ಮೂಳೆಯನ್ನೇ ಮುರಿಯುತ್ತಿದೆ ಎಂದೂ, ಭೂ ಸುಧಾರಣೆ ಜಾರಿ ಮಾಡದಿರುವುದರಿಂದ ಗ್ರಾಮಾಂತರ ಪ್ರದೇಶದ ಜನರನ್ನು ಭಿಕಾರಿಗಳನ್ನಾಗಿ ಮಾಡಿದೆಂದೂ, ಗ್ರಾಹಕ ವಸ್ತುಗಳ ವಿತರಣೆ ಸರಿಯಾಗಿಲ್ಲದೆ, ಸಮಾಜದಲ್ಲಿ ಭ್ರಷ್ಟಾಚಾರಕ್ಕೆ ಹೆಚ್ಚು ಅವಕಾಶ ಮಾಡಿಕೊಟ್ಟಿದೆಂದೂ ಬೃಹತ್ ಸಭೆಯಲ್ಲಿ ಪಾಸಾದ ನಿರ್ಣಯ ಹೇಳಿದೆ.

ಕಾರ್ಖಾನೆಗಳ ಮುಚ್ಚುವಿಕೆ, ಲಾಕೌಟ್‌ಗಳು ಹೆಚ್ಚಾಗುತ್ತಿವೆಂದೂ, ರಜಿಷ್ಟರಾದ ನಿರುದ್ಯೋಗಿಗಳ ಸಂಖ್ಯೆ 1981ರಲ್ಲಿ 16.5 ಮಿಲಿಯದಿಂದ 1983 ರಲ್ಲಿ 21.5 ಮಿಲಿಯದಷ್ಟಾಗಿದೆಯೆಂದೂ, ಯೋಜನಾ ಆಯೋಗ ಕೂಡ ಆರನೇ ಯೋಜನೆಯಲ್ಲಿ ಉದ್ಯೋಗ ಒದಗಿಸುವ ಅವಕಾಶ ಕಡಿತಗೊಳಿಸಿದೆಯೆಂದೂ, ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಕೇಂದ್ರ ಸರಕಾರ ಕಾರ್ಮಿಕ ಕೇಂದ್ರಗಳೊಡನೆ ಕೂಡಲೇ ಚರ್ಚೆ ಪ್ರಾರಂಭಿಸಬೇಕೆಂದೂ ನಿರ್ಣಯ ಕೇಳಿಕೊಂಡಿದೆ.

ಸರಕಾರ ತನ್ನ ನಿಲುವಿನಲ್ಲಿ ಬದಲಾವಣೆ ಮಾಡುವಂತೆ ಕಾರ್ಮಿಕವರ್ಗ ಹೋರಾಟ ಮುಂದುವರಿಸಬೇಕೆಂದು ಬಹಿರಂಗ ಸಭೆ ಕರೆ ಕೊಟ್ಟಿದೆ.

ಪಂಜಾಬ್, ಹರಿಯಾಣ ಮತ್ತು ಇತರ ಪ್ರದೇಶಗಳಲ್ಲಿ ಕಾರ್ಮಿಕ ವರ್ಗದ ಐಕ್ಯತೆಗೆ ಅಪಾಯವನ್ನುಂಟು ಮಾಡುವಂಥ ಧಾರ್ಮಿಕ ಗುಂಪುಗಳೊಳಗೆ ಬೆಳೆಯುತ್ತಿರುವ ದ್ವೇಷದ ಕುರಿತು ಮತಪ್ರದರ್ಶನಕಾರರು ತಮ್ಮ ಆತಂಕ ವ್ಯಕ್ತ ಮಾಡಿ, ತಮ್ಮನ್ನು ಶೋಷಿಸುವವರ ವಿರುದ್ಧ ನಡೆಸಿರುವ ಚಳುವಳಿ ಯಶಸ್ವಿಯಾಗಬೇಕಾದರೆ ಅಂಥ ಶಕ್ತಿಗಳ ವಿರುದ್ಧ ಬಲವಾದ ಹೋರಾಟ ನಡೆಸುವ ಅವಶ್ಯಕತೆಯನ್ನೂ ಹೇಳಿದೆ. ಈ ಬೃಹತ್ ಮತಪ್ರದರ್ಶನದಿಂದ ಸ್ಫೂರ್ತಿಗೊಂಡ ದುಡಿಯುವ ಸಮುದಾಯ, ಬರೀ ಮತ ಪ್ರದರ್ಶನಗಳಿಂದಲೇ ತಮ್ಮ ಸಮಸ್ಯೆ ಬಗೆಹರಿಯುವುದಿಲ್ಲ, ದೇಶಾದ್ಯಂತ ಸಂಘಟಿತ ಹೋರಾಟ ಅಗತ್ಯ, ಅಂಥ ಹೋರಾಟಕ್ಕೆ ರಾಷ್ಟ್ರೀಯ ಆಂದೋಲನ ಸಮಿತಿ ಕರೆ ಕೊಡಬೇಕು, ಅದಕ್ಕೆ ಮಾರ್ಗದರ್ಶನ ನೀಡಬೇಕು, ಹೋರಾಟದಿಂದ ಸರಕಾರದ ನೀತಿಯಲ್ಲಿ ಬದಲಾವಣೆ ಮಾಡಬೇಕೆಂಬ ದೃಢ ನಿಲುವಿನೊಂದಿಗೆ ಹಿಂತಿರುಗಿದರು.

*

ದುಡಿಯುವ ಮಹಿಳೆಯರ ಸಮಾವೇಶದ ಕರೆ

ಸಂಘಟಿತರಾಗಿ ಹೋರಾಡೋಣ

ಕೋಟ್ಯಾವಧಿ ಮಹಿಳೆಯರು ನಮ್ಮ ದೇಶದ ಕಾರ್ಖಾನೆ, ಹೊಲ, ತೋಟ, ಕಟ್ಟಡ ನಿರ್ಮಾಣ, ಸರಕಾರಿ ಅಭಿವೃದ್ಧಿ ಯೋಜನೆಗಳು, ಗೃಹ ಕೆಲಸ- ಹೀಗೆ ಎಲ್ಲ ಕ್ಷೇತ್ರಗಳಲ್ಲೂ ದುಡಿಯುತ್ತಿದ್ದಾರೆ. ಆದರೆ ಇವರಲ್ಲಿ ಅಸಂಘಟಿತರೇ ಹೆಚ್ಚು. ಸಂಘಟಿತ ಕಾರ್ಮಿಕರ ಸತತ ಹೋರಾಟದ ಫಲವಾಗಿ ಮಹಿಳಾ ಕಾರ್ಮಿಕರಿಗೆ ಸಮಾನ ವೇತನ, ಹೆರಿಗೆ ಸೌಲಭ್ಯ, ಮೊದಲಾದವುಗಳು ಮಂಜೂರಿಯಾದಾಗ, ಮಾಲಕ ವರ್ಗ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕುವ ನೀಚ ಕೃತಿಗಿಳಿದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಲಕ್ಷಾವಧಿ ದುಡಿಯುವ ಮಹಿಳೆಯರನ್ನು ನೌಕರಿಯಿಂದ ತೆಗೆದುಹಾಕಲಾಗಿದೆ. ಹಲವಾರು ಸವಲತ್ತುಗಳನ್ನೂ ನಿರಾಕರಿಸಲಾಗುತ್ತಿದೆ. ದುಡಿಯುವ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿಯೇ ಹೋರಾಡುವಂಥ ಪರಿಸ್ಥಿತಿ ಉಂಟಾಗಿದೆ.

ದುಡಿಯುವ ಮಹಿಳೆಯರ ಪ್ರತ್ಯೇಕ ಸಂಘಟನೆ ಕಟ್ಟುವ ಪ್ರಯತ್ನವನ್ನು ಸಿಐಟಿಯು ಬಹಳ ವರ್ಷಗಳಿಂದ ನಡೆಸುತ್ತಲೇ ಬಂದಿದೆ. ನಮ್ಮ ದೇಶದಲ್ಲಿ ಇನ್ನೂ ಪಾಳೆಗಾರಿ- ಅರೆ ಪಾಳೆಗಾರಿ ಪದ್ಧತಿ ಹಾಗೆಯೇ ಮಹಿಳೆಯರೆಂದರೆ ಪುರುಷನ ಆದೇಶದಂತೆ ನಡೆಯಬೇಕೆಂಬ ಪ್ರವೃತ್ತಿ, ರೂಢಿ ಆಳವಾಗಿರುವಾಗ ಬಲವಾದ ಸಂಘಟನೆ ಕಟ್ಟಲಿಕ್ಕೆ ಅಡ್ಡಿ ಆತಂಕಗಳುಂಟಾಗುತ್ತಿವೆ. ಆದರೂ ಕೂಡ ಸಿಐಟಿಯುವಿನ ಸತತ ಪ್ರಯತ್ನದಿಂದಾಗಿ ಮಹಿಳೆಯರು ಸಂಘಟಿತರಾಗುತ್ತಿದ್ದಾರೆ. ಸಿ.ಐ.ಟಿ.ಯು.ವಿನ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಮೂರನೇ ಸಮಾವೇಶ ದಿಲ್ಲಿಯಲ್ಲಿ ಏಪ್ರಿಲ್ 17 ರಂದು ಸೇರಿ ಸಂಘಟನೆಯನ್ನು ಬಲಪಡಿಸಿ ಹೋರಾಟವನ್ನು ಮುನ್ನಡೆಸೋಣ ಎಂಬ ನಿರ್ಣಯ ಕೈಗೊಂಡಿತು.

ಏಳು ರಾಜ್ಯಗಳಿಂದ 184 ಪ್ರತಿನಿಧಿಗಳು ಬಂದಿದ್ದರು. ಅಶಾಂತಿಗೆ ತುತ್ತಾಗಿರುವ ಪಂಜಾಬಿನಿಂದ 29, ದಿಲ್ಲಿಯಿಂದ 28, ಬಿಹಾರ 26, ಪ. ಬಂಗಾಲ 24, ತಮಿಳುನಾಡು 22, ಆಂಧ್ರ 15, ಕೇರಳ 7, ಕರ್ನಾಟಕ 1. ಸಮ್ಮೇಳನಕ್ಕೆ ಹೋದರೆ ಕೊಲೆ ಮಾಡಲಾಗುವುದೆಂದು ಪಂಜಾಬಿ ಮಹಿಳೆಯರಿಗೆ ಬೆದರಿಕೆ ಹಾಕಲಾಗಿತ್ತು. ತೀವ್ರ ಹೋರಾಟ ನಡೆಸಿ ಬಂದವರು ಬಿಹಾರಿನ ಗ್ರಾಮಸೇವಕಿಯರು. ಹೀಗೆ ತೀವ್ರ ಹೋರಾಟದ ರುಚಿ ಕಂಡ ಪ್ರತಿನಿಧಿಗಳೇ ಈ ಸಮಾವೇಶದಲ್ಲಿ ಪಾಲ್ಗೊಂಡಿರುವುದೊಂದು ವಿಶೇಷ.

ಈ ಪ್ರತಿನಿಧಿಗಳಲ್ಲಿ 56 ಜನ ಕಾರ್ಮಿಕ ಸಂಘಟನೆಗಳಲ್ಲಿ ಅಧಿಕಾರ ಸ್ಥಾನದಲ್ಲಿದ್ದವರಾಗಿದ್ದಾರೆ. ಈ ಹಿಂದೆ ಯೂನಿಯನ್‌ಗಳಲ್ಲಿ ಮಹಿಳೆಯವರಿಗೆ ಯಾವ ಸ್ಥಾನವೂ ಸಿಗುತ್ತಿರಲಿಲ್ಲ.

ಸಮಾವೇಶವನ್ನು ಉದ್ಘಾಟನೆ ಮಾಡುತ್ತ ಲೋಕಸಭೆ ಸದಸ್ಯರಾದ ಸುಶೀಲಾ ಗೋಪಾಲನ್ ಅವರು ತಮ್ಮ ಭಾಷಣದಲ್ಲಿ ಆಧುನೀಕರಣ ಮತ್ತು ಹೊಸ ತಂತ್ರಜ್ಞಾನಗಳಿಂದಾಗಿ ಉದ್ಯೋಗವಕಾಶ ಕಡಿಮೆಯಾಗುತ್ತಿರುವ ಭೀಕರ ಪರಿಸ್ಥಿತಿಯನ್ನೆದುರಿಸಬೇಕಾಗಿದೆಂದೂ ಇಂಥ ನವೀಕರಣಕ್ಕೆ ಮಹಿಳೆಯರೇ ಮೊದಲು ಬಲಿಯಾಗುತ್ತಿದ್ದಾರೆಂದೂ, ತಾವೆದುರಿಸಬೇಕಾಗಿ ಬರುವ ನಿರುದ್ಯೋಗದ ಭೀತಿಯಿಂದ ಇಂಥ ಮಹಿಳೆಯರೆಲ್ಲ ಕಡಿಮೆ ವೇತನದಲ್ಲಿ ದುಡಿಯಲು ತಯಾರಾಗುತ್ತಿದ್ದಾರೆಂದೂ, ಆ ಕಾರಣದಿಂದಾಗಿಯೇ ಸರಕಾರ ಮತ್ತು ಖಾಸಗಿ ಕಾರ್ಖಾನೆದಾರರೆಲ್ಲ ಮಹಿಳೆಯರಿಗೆ ಕಡಿಮೆ ಸಂಬಳ ಕೊಟ್ಟು ದುಡಿಸುತ್ತಿದ್ದಾರೆಂದು ಹೇಳಿದರು.

ಹತ್ತಿಗಿರಣಿ ಹಾಗೆಯೇ ಇತರ ಕಾರ್ಖಾನೆಗಳಲ್ಲಿಯ ದುಡಿಯುವ ಮಹಿಳೆಯರು ಕಳೆದ ಎರಡು ವರ್ಷಗಳಲ್ಲಿ ತೀವ್ರ ಹೋರಾಟ ನಡೆಸಿರುವುದನ್ನು ವಿಮಲ್ ರಣದಿವೆಯವರು ವಿವರಿಸಿದರು. ಪಶ್ಚಿಮ ಬಂಗಾಲದ ಮಂತ್ರಿ ನಿರುಪಮಾ ಚಟರ್ಜಿಯವರು ಅಸಂಘಟಿತರಾಗಿರುವ ಮಹಿಳಾ ಕಾರ್ಮಿಕರೇ ನೌಕರಿ ಕಳೆದುಕೊಳ್ಳಬೇಕಾಗುತ್ತದೆಂದೂ, ಆದ್ದರಿಂದ ಸಂಘಟನೆ ಅತ್ಯಗತ್ಯವೆಂದೂ ಹೇಳಿ, ಪಶ್ಚಿಮ ಬಂಗಾಲ ಸರಕಾರ ದುಡಿಯುವ ಮಹಿಳೆಯರ ಹೋರಾಟಕ್ಕೆ ಯಾವ ರೀತಿ ಬೆಂಬಲ ಕೊಡುತ್ತಿದೆ, ಅವರನ್ನು ಸಂಘಟಿಸುತ್ತಿದೆಂದು ವಿವರಿಸಿ ಎಡರಂಗ ಸರಕಾರಕ್ಕೂ, ಇಂದಿರಾ ಸರಕಾರಕ್ಕೂ ಇರುವ ವ್ಯತ್ಯಾಸವನ್ನು ವಿವರಿಸಿದರು.

ಸಮಾವೇಶದ ಘೋಷಣೆಯನ್ನು ಹೋರಾಟದಲ್ಲಿ ನುರಿತ ಬಿಹಾರಿನ ಗ್ರಾಮಸೇವಿಕೆ ಈ ರೀತಿ ಹೇಳಿದರು- "ಸಂಘಟಿತರಾಗಲು, ಹೋರಾಡಲು ಮತ್ತು ಬದಲಾವಣೆಯನ್ನುಂಟು ಮಾಡಲು ನಾವಿಲ್ಲಿ ಬಂದಿದ್ದೇವೆ."

ಸಿಐಟಿಯು ಅಧ್ಯಕ್ಷ ಬಿ. ಟಿ. ರಣದಿವೆಯವರು ಈ ರೀತಿ ಘೋಷಿಸಿದರು. ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ದಬ್ಬಾಳಿಕೆ ಹೆಚ್ಚಾಗುತ್ತಿರುವಾಗ ಇನ್ನೂ ಎಷ್ಟು ದಿವಸ ಇಂದಿರಾ ಗಾಂಧಿಯನ್ನು ರಾಜ್ಯವಾಳಲು ಬಿಡುತ್ತೀರಿ? ಇಂದಿರಾ ಮತ್ತು ಇಂಗ್ಲೆಂಡಿನ ಪ್ರಧಾನ ಮಂತ್ರಿ ಇಬ್ಬರೂ ಮಹಿಳೆಯರೇ. ಆದರೆ ಅವರು ಬಂಡವಾಳಶಾಹಿ ವರ್ಗದ ಹಿತ ಸಾಧಿಸುತ್ತಿದ್ದಾರೆ. ಇದನ್ನೆಲ್ಲ ದುಡಿಯುವ ಮಹಿಳೆ ಬದಲಾಯಿಸಬೇಕು. ಈ ಪಕ್ಷವನ್ನು ಅಧಿಕಾರದಿಂದ ಕಿತ್ತು ಹಾಕಬೇಕು. ಹಾಗಾಗಬೇಕಾದರೆ ಬಲಿಷ್ಠವಾದ ಕಾರ್ಮಿಕವರ್ಗ ಮತ್ತು ಪ್ರಜಾಪ್ರಭುತ್ವ ಚಳುವಳಿ ಅತ್ಯಗತ್ಯ. ಅದರಲ್ಲಿ ಮಹಿಳೆಯರು ಭಾಗವಹಿಸಬೇಕು. ಹಾಗಾದರೆ ಮಾತ್ರ ದೇಶದ ಐಕ್ಯತೆ ಮತ್ತು ಸ್ವಾತಂತ್ರ್ಯ ಉಳಿಯಲು ಸಾಧ್ಯ. ಇದು ಎಲ್ಲರ ಜವಾಬ್ದಾರಿ.

*

ಲೆನಿನ್ ಮತ್ತು ಪಾರ್ಲಿಮೆಂಟರಿ ಚಟುವಟಿಕೆಗಳು

ಕಾ. ಇ. ಎಂ. ಎಸ್. ನಂಬೂದರಿಪಾದ್

ಅನು : ಜಿ. ಎನ್. ನಾಗರಾಜ್

(ಲೆನಿನ್ ಜನ್ಮಶತಾಬ್ಧಿಯ ಸಂದರ್ಭದಲ್ಲಿ "ಪೀಪಲ್ಸ್ ಡೆಮಾಕ್ರಸಿ" ಪತ್ರಿಕೆ (ಏಪ್ರಿಲ್ 22,1970 ರಂದು) ಹೊರತಂದ ವಿಶೇಷ ಸಂಚಿಕೆ ಲೆನಿನ್, ಲೆನಿನ್‌ವಾದದ ಬಗ್ಗೆ ಇಂದಿನ ಜಗತ್ತು, ಭಾರತ, ಮತ್ತು ಭಾರತದ ಕಮ್ಯೂನಿಸ್ಟ್ ಚಳುವಳಿಯಲ್ಲಿ ಲೆನಿನ್‌ವಾದದ ಪ್ರಸ್ತುತತೆಯ ಬಗ್ಗೆ ಅಮೂಲ್ಯ ಲೇಖನಗಳನ್ನೊಳಗೊಂಡಿದೆ. ಅಲ್ಲದೆ ಲೆನಿನ್ ಶತಾಬ್ದಿಯ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸ್ವೀಕರಿಸಿದ ನಿರ್ಣಯದ ಪೂರ್ಣ ಪಾಠವನ್ನೊಳಗೊಂಡಿದೆ ಈ ವಿಶೇಷ ಸಂಚಿಕೆಯನ್ನು ಎಲ್ಲರೂ ಓದ ಬೇಕಾದ ಅವಶ್ಯಕತೆಯತ್ತ ಗಮನ ಸೆಳೆಯುತ್ತಾ ಲೆನಿನ್ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಕಾಂ. ಇ. ಎಂ. ಎಸ್. ರವರು ಬರೆದ ಲೇಖನದ ಅನುವಾದವನ್ನು ಇಲ್ಲಿ ಪ್ರಕಟಿಸಲಾಗಿದೆ.)

ಲೆನಿನ್‌ರವರು ತಮ್ಮ "ರಾಜ್ಯ ಮತ್ತು ಕ್ರಾಂತಿ"ಯಲ್ಲಿ ಪಾರ್ಲಿಮೆಂಟರಿ ಚಟುವಟಿಕೆಗಳ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಚಿಂತನೆಗಳನ್ನೆಳವಡಿಸಿ, ವಿಶ್ಲೇಷಿಸಿ, ವಿವಿಧ ಸಂದರ್ಭಗಳಲ್ಲಿ ಅವುಗಳ ಕಾರ್ಯಾಚರಣೆಯ ಬಗ್ಗೆ ವಿಷದವಾಗಿ ಬರೆದಿದ್ದಾರೆ. ಈ ಚಿಂತನೆಗಳನ್ನು ವಿರೂಪ ಮಾಡುವುದರ ಬಗ್ಗೆ ಬರೆಯುತ್ತಾ, "ರಾಜ್ಯ ಶಕ್ತಿ ಮತ್ತು ಕಾರ್ಮಿಕ ಕ್ರಾಂತಿಯ ಸಂಬಂಧದ ಪ್ರಶ್ನೆಯನ್ನು ವಿರೂಪ ಮಾಡುವುದಾಗಲೀ, ಹುದುಗಿಸುವ ಪ್ರಯತ್ನ ಮಾಡುವುದಾಗಲೀ, ರಾಜ್ಯಗಳು ಸಾಮ್ರಾಜ್ಯಶಾಹೀ ಸ್ಪರ್ಧೆಗಾಗಿ ತಮ್ಮ ಮಿಲಿಟರಿ ಯಂತ್ರವನ್ನು ವಿಸ್ತರಿಸಿ ಮಿಲಿಟರಿ ದೈತ್ಯರಂತೆ ವರ್ತಿಸುತ್ತಿರುವ ಸಂದರ್ಭದಲ್ಲಿ, ಕಾರ್ಮಿಕ ಚಳುವಳಿಯ ಮೇಲೆ ಅಗಾಧ ದುಷ್ಪರಿಣಾಮವನ್ನು ಬೀರದಿರುವುದು ಸಾಧ್ಯವೇ ಇಲ್ಲ" ಎಂಬ ನಿರ್ಣಯಕ್ಕೆ ಬಂದಿದ್ದಾರೆ.

ನಮ್ಮ ದೇಶದ ಪರಿಷ್ಕರಣವಾದಿಗಳು ಲೆನಿನ್, ಮಾರ್ಕ್ಸ್, ಎಂಗೆಲ್ಸ್‌ರ ಚಿಂತನೆಗಳನ್ನು ವಿರೂಪಗೊಳಿಸುತ್ತಿರುವ ರೀತಿ ತತ್ವ ಮತ್ತು ಕಾರ್ಯಾಚರಣೆಯ ಅನೇಕ ಆಯಾಮಗಳನ್ನು ಆವರಿಸಿದೆ. ಈ ವಿರೂಪಗಳಲ್ಲಿ ಬಹಳ ಮಹತ್ವದವು ಮತ್ತು ನಿರ್ಣಾಯಕವಾದವುಗಳಾವುವೆಂದರೆ ಅವರು ಪ್ರಸಕ್ತ ಭಾರತದ ಪ್ರಭುತ್ವವನ್ನು ಅದರ ಬೂರ್ಜ್ವಾ ಪಾರ್ಲಿಮೆಂಟರಿ ಸಂಸ್ಥೆಗಳನ್ನು ನೋಡುವ ದೃಷ್ಟಿಕೋನ ಮತ್ತು ಈ ಸಂಸ್ಥೆಗಳನ್ನು ಶ್ರಮಿಕ ವರ್ಗ ತನ್ನ ಹೋರಾಟದಲ್ಲಿ ಬಳಸಿಕೊಳ್ಳುವ ರೀತಿ. ಇದೇ ಮಾರ್ಕ್ಸ್‌ವಾದಿಗಳಿಗೂ ಮತ್ತು ಪರಿಷ್ಕರಣವಾದಿಗಳಿಗೂ ಇರುವ ಭಿನ್ನತೆಯ ನೆಲೆ.

ಬಲ ಮತ್ತು ಎಡ ಸಮಯ ಸಾಧಕತನ

ಲೆನಿನ್ನರು, ಬೂರ್ಜ್ವಾ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಉಪಯೋಗಿಸಿಕೊಳ್ಳುವುದರ ವಿಷಯದಲ್ಲಿ ಬಲಸಮಯ ಸಾಧಕತನದ ವಿರುದ್ಧ ಮತ್ತು ಎಡ ಪಂಥವಾದದ ವಿರುದ್ಧ ನಿರ್ಧಾರ ಪೂರ್ವಕವಾದ ಪಟ್ಟು ಬಿಡದ ನಿರಂತರ ಹೋರಾಟವನ್ನು ಸಾಗಿಸಿದರು.

"ರಾಜ್ಯ ಮತ್ತು ಕ್ರಾಂತಿ", "ಕಾರ್ಮಿಕ ಕ್ರಾಂತಿ ಮತ್ತು ತತ್ವಭ್ರಷ್ಟ ಕೌತ್‌ಸ್ಕಿ" ಎಂಬ ಮಹತ್ವದ ಕೃತಿಗಳಷ್ಟೇ ಅಲ್ಲದೆ ಅನೇಕ ಲೇಖನಗಳಲ್ಲಿ, ಕರಪತ್ರಗಳಲ್ಲಿ, ಬೂರ್ಜ್ವಾ ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಕಾರ್ಮಿಕವರ್ಗ ಉಪಯೋಗಿಸಿಕೊಂಡು ಬಂಡವಾಳಶಾಹಿ ಅಧಿಕಾರವನ್ನು ಸಮಾಜವಾದಕ್ಕೆ ಪರಿವರ್ತಿಸಲು ಸಾಧ್ಯ ಎಂಬ ಬಲಸಮಯ ಸಾಧಕರ, ನಯವಾದ ಜಾಣತನದ ವಾದಗಳನ್ನು ಬಯಲಿಗೆಳೆದರು. ಅಷ್ಟೇ ಅಲ್ಲದೆ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮುಖವಾಡ ತೊಟ್ಟ ಬಂಡವಾಳ ಶಾಹೀ ಸರ್ವಾಧಿಕಾರವನ್ನು ಮುರಿಯಲು ನಿರಂತರ ಹೋರಾಟ ನಡೆಸಬೇಕು ಮತ್ತು ಈ ಸರ್ವಾಧಿಕಾರಿ ರಾಜ್ಯ ಶಕ್ತಿಯನ್ನು ಬಗ್ಗು ಬಡಿಯಬೇಕು ಎಂದು ಯಶಸ್ವಿಯಾಗಿ ಸಾಧಿಸಿ ತೋರಿಸಿದರು.

ಅದೇ ಸಮಯದಲ್ಲಿ ಎಡ ಪಂಥವಾದದ ಬಾಲಿಶತನವನ್ನು ಅವರು ಬಯಲಿಗೆಳೆದರು.

ಕಾರ್ಮಿಕ ವರ್ಗದ ವರ್ಗಜಾಗೃತ ಮುಂದಾಳು ಬೂರ್ಜ್ವಾ ಪ್ರಜಾಸತ್ತೆಯ ಸಂಸ್ಥೆಗಳಲ್ಲಿ ಭಾಗವಹಿಸಿದರೆ ಮಾತ್ರ ಸಾಧ್ಯವಾಗುವ, ಬಂಡವಾಳಶಾಹಿ ರಾಜ್ಯ ಶಕ್ತಿಯ ಸರ್ವಾಧಿಕಾರಿ ನಿಜ ಸ್ವರೂಪವನ್ನು ಬಿಚ್ಚಿ ತೋರಿಸುವ ಮಹತ್ವದ ಕೆಲಸದಲ್ಲಿ ದುಡಿಯುವ ಜನತೆಯ ಅರಿವು ಮೂಡದ ಜನ ವಿಭಾಗವನ್ನು ತನ್ನ ಸುತ್ತ ನೆರೆಯಿಸುವ ಪ್ರಮುಖ ಕರ್ತವ್ಯದಲ್ಲಿ ಕಾರ್ಮಿಕ ವರ್ಗದ ಪಾತ್ರವನ್ನೇ ನಿರಾಕರಿಸುವ ಎಡಪಂಥವಾದದ ಬಾಲಿಶತನವನ್ನು ಬಯಲಿಗೆಳೆದರು.

ಪಾರ್ಲಿಮೆಂಟರಿ ಸಂಸ್ಥೆಗಳಲ್ಲಿ ಕಾರ್ಮಿಕ ವರ್ಗದ ಪಾತ್ರವನ್ನು ವಿರೂಪಗೊಳಿಸುವ ಬಲಸಮಯ ಸಾಧಕತನ ಮತ್ತು ಪೂರ್ಣವಾಗಿ ನಿರಾಕರಿಸುವ ಎಡಪಂಥವಾದದ ಬಗ್ಗೆ ತನ್ನ ವಾದದ ಸಾರವನ್ನು ಮಂಡಿಸುತ್ತಾ "ಎಡ ಪಂಥೀಯ ಕಮ್ಯೂನಿಸಂ ಒಂದು ಬಾಲಗ್ರಹ ಪೀಡೆ"ಯಲ್ಲಿ ಹೀಗೆ ಹೇಳಿದ್ದಾರೆ.

'ಪಾರ್ಲಿಮೆಂಟ್‌ವಾದ (ಸಂಸದೀಯತೆ) ಚಾರಿತ್ರಿಕ ಅವಶೇಷವಾಗಿಬಿಟ್ಟಿದೆ. ಇದು ಪ್ರಚಾರಾತ್ಮಕ ಅರ್ಥದಲ್ಲಿ ನಿಜ. ಆದರೆ ಎಲ್ಲರಿಗೂ ಗೊತ್ತಿದೆ, ಕಾರ್ಯಾಚರಣೆಯಲ್ಲಿ ಇದನ್ನು ನಿವಾರಿಸುವುದು ಸಾಧ್ಯವಿಲ್ಲ ಎಂದು. ಬಂಡವಾಳ ಶಾಹಿಯನ್ನು ಅನೇಕ ದಶಕಗಳ ಹಿಂದೆ ಚಾರಿತ್ರಿಕ ಅವಶೇಷವೆಂದು ನ್ಯಾಯ ಸಮ್ಮತವಾಗಿ ಘೋಷಿಸಬಹುದಿತ್ತು. ಆದರೆ ಬಂಡವಾಳ ಶಾಹಿಯ ಮೂಲ ಆಧಾರದ ಮೇಲೆ ದೀರ್ಘವಾದ, ನಿರಂತರವಾದ ಹೋರಾಟವನ್ನು ನಡೆಸಬೇಕಾದ ಅವಶ್ಯಕತೆಯನ್ನು ನಿವಾರಿಸುತ್ತದೆಯೆ? ವಿಶ್ವ ಇತಿಹಾಸದ ದೃಷ್ಟಿಯಿಂದ ಪಾರ್ಲಿಮೆಂಟ್‌ವಾದ ಚಾರಿತ್ರಿಕ ಅವಶೇಷವಾಗಿದೆ ಎಂದರೆ ಬೂರ್ಜ್ವಾ ಪಾರ್ಲಿಮೆಂಟ್‌ವಾದದ ಕಾಲ ಮುಗಿದು ಶ್ರಮಿಕ ಸರ್ವಾಧಿಕಾರದ ಯುಗ ಆರಂಭವಾಗಿದೆ. ಇದನ್ನು ಯಾರೂ ನಿರಾಕರಿಸಲಾಗುವುದಿಲ್ಲ. ಆದರೆ ವಿಶ್ವದ ಇತಿಹಾಸವನ್ನಳೆಯುವ ಮಾನದಂಡ ದಶಕಗಳು, ವರ್ಷಗಳಲ್ಲ. ಹತ್ತು ಅಥವಾ ಇಪ್ಪತ್ತು ವರ್ಷಗಳ ಅವಧಿ ಜಾಗತಿಕ ಇತಿಹಾಸದ ದೃಷ್ಟಿಯಿಂದ ಗಣನೆಗೆ ಬಾರದ್ದು, ಯಕಶ್ಚಿತ. ಆದುದರಿಂದ ಜಾಗತಿಕ ಇತಿಹಾಸದ ಮಾನದಂಡವನ್ನು ದಿನನಿತ್ಯದ ರಾಜಕಾರಣಕ್ಕೆ ಅನ್ವಯಿಸುವುದು ಒಂದು ಎದ್ದು ಕಾಣುವ ತಾತ್ವಿಕ ದೋಷವಾಗುತ್ತದೆ.

ಜರ್ಮನಿಯ ಕಮ್ಯೂನಿಸ್ಟರಿಗೆ ಸಂಸದೀಯವಾದ ಒಂದು ರಾಜಕೀಯ ಅವಶೇಷವಾಗಿದೆ. ಆದರೆ ನಿಜವಾದ ಸಂಗತಿ ಏನು? ನಮಗೆ ಯಾವುದು ಅವಶೇಷವಾಗಿ ಬೆಲೆ ಕಳೆದುಕೊಂಡದ್ದಾಗಿ ಕಾಣಿಸುತ್ತದೆಯೋ ಅದನ್ನು ಇಡಿ ಕಾರ್ಮಿಕ ವರ್ಗಕ್ಕೆ ಇಡೀ ಜನ ಸಮುದಾಯದ ದೃಷ್ಟಿಯಲ್ಲಿ ಕೂಡ ನಿಜ ಎಂದು ಪರಿಗಣಿಸಬಾರದು. ಇಲ್ಲಿ ಮತ್ತೆ ನಾವು ಎಡಪಂಥವಾದಿಗಳಿಗೆ ತಮ್ಮ ತರ್ಕವನ್ನು ಮಂಡಿಸುವ ರೀತಿ ಗೊತ್ತಿಲ್ಲ, ಒಂದು ಇಡೀ ವರ್ಗದ ಪಕ್ಷವಾಗಿ, ಇಡೀ ಜನ ಸಮುದಾಯದ ಪಕ್ಷವಾಗಿ ವರ್ತಿಸುವುದು ತಿಳಿದಿಲ್ಲ ಎಂದು ಕಂಡು ಕೊಳ್ಳಬಹುದು. ನೀವು ಜನ ಸಮೂಹದ ಮಟ್ಟಕ್ಕೆ ಕಾರ್ಮಿಕ ವರ್ಗದ ಹಿಂದುಳಿದ ಪ್ರಜ್ಞೆಯ ಮಟ್ಟಕ್ಕೆ ಇಳಿಯಬಾರದು, ಇದು ನಿರಾಕರಿಸಲಾಗದ ಸತ್ಯ. ಅವರಿಗೆ ನೀವು ಕಹಿ ಸತ್ಯವನ್ನು ಹೇಳಬೇಕು. ಅವರ ಬೂರ್ಜ್ವಾ ಪ್ರಜಾಸತ್ತಾತ್ಮಕ, ಪಾರ್ಲಿಮೆಂಟರಿ ಮೌಢ್ಯಗಳನ್ನು ಮೌಢ್ಯಗಳೆಂದು ಅವುಗಳ ನಿಜ ಹೆಸರಿನಿಂದಲೇ ಕರೆಯಬೇಕು. ಆದರೆ ಅದೇ ಸಮಯದಲ್ಲಿ, ನೀವು ಎಚ್ಚರದಿಂದ ಇಡೀ ಕಾರ್ಮಿಕವರ್ಗದ ದುಡಿಯುವ ಜನ ಸಮೂಹದ (ಅದರ ಕಮ್ಯೂನಿಸ್ಟ್ ಮುಂದಾಳ ಮಾತ್ರವೇ ಅಲ್ಲ) ವರ್ಗ ಪ್ರಜ್ಞೆಯ ನಿಜ ಸ್ಥಿತಿಯನ್ನು, ಆದರ ಸಿದ್ಧತೆಯನ್ನು ಪರಿಶೀಲಿಸಬೇಕು" ಎಂದು ಹೇಳಿದ್ದಾರೆ.

ರಷ್ಯ ಬೂರ್ಜ್ವಾ ಪಾರ್ಲಿಮೆಂಟನಲ್ಲಿ 1917 ರ ಸೆಪ್ಟೆಂಬರ್-ನವೆಂಬರ್ ಅವಧಿಯ ಸಂವಿಧಾನ ಸಭೆಯಲ್ಲಿ ಬೋಲ್ಶೆವಿಕ್ಕರು ಭಾಗವಹಿಸಿ ಪಡೆದ ಅನುಭವದ ಆಧಾರದ ಮೇಲೆ ಹೀಗೆ ಹೇಳಿದ್ದಾರೆ. "ಕ್ರಾಂತಿಗೆ ಇನ್ನು ಕೆಲವೇ ವಾರಗಳಿರುವಾಗಲೂ ಕ್ರಾಂತಿ ಯಶಸ್ವಿಯಾದ ನಂತರವೂ ಬೂರ್ಜ್ವಾ ಪಾರ್ಲಿಮೆಂಟುಗಳಲ್ಲಿ ಭಾಗವಹಿಸುವುದರಿಂದ ಕ್ರಾಂತಿಕಾರಿ ಕಾರ್ಮಿಕ ವರ್ಗಕ್ಕೆ ಹಾನಿಯೇನು ಆಗಲಾರದು. ಬದಲಾಗಿ, ಅರಿವು ಮೂಡದ ಜನ ಸಮೂಹಕ್ಕೆ, ಈ ಸಂಸ್ಥೆಗಳನ್ನು ನಾಶ ಮಾಡಬೇಕಾದ ಅವಶ್ಯಕತೆಯನ್ನು ಸಾಧಿಸಿ ತೋರಿಸಲು ನೆರವಾಗುತ್ತದೆ; ಈ ಸಂಸ್ಥೆಗಳ ವಿಸರ್ಜನೆ ಸರಾಗವಾಗುತ್ತದೆ; ಕಾರ್ಮಿಕವರ್ಗ ಬೂರ್ಜ್ವಾ ಪಾರ್ಲಿಮೆಂಟರಿ ಪದ್ಧತಿಯನ್ನು ರಾಜಕೀಯವಾದಿ ನಿಕ್ಷೇಪಮಾಡಲು ಸಹಾಯಕವಾಗುತ್ತದೆ.

ಕಾರ್ಮಿಕ ವರ್ಗಕ್ಕೆ ಬೂರ್ಜ್ವಾ ಪಾರ್ಲಿಮೆಂಟರಿ ಪ್ರಜಾಸತ್ತೆಯ ಸಂಸ್ಥೆಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಮತ್ತು ಸಮಾಜದ ಕ್ರಾಂತಿಕಾರಕ ಬದಲಾವಣೆಯ ಸಾಧನವಾಗಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ ಎಂಬ ಮಾರ್ಕ್ಸ್‌ರ ವಿಚಾರಕ್ಕೆ ಲೆನಿನ್ ಸಂಪೂರ್ಣವಾಗಿ ಬದ್ಧರು. ಆದರೆ ಆ ಸಂಸ್ಥೆಗಳನ್ನು, ಶೋಷಕರ ವರ್ಗ ಪ್ರಭುತ್ವವನ್ನು ನುಚ್ಚುನೂರು ಮಾಡುವ ಕ್ರಾಂತಿಯ ನಿರ್ಣಾಯಕ ಹೋರಾಟಕ್ಕೆ, ಇನ್ನೂ ಅರಿವುಮೂಡದ ಕಾರ್ಮಿಕ ವರ್ಗದ ಹಿಂದುಳಿದ ವಿಭಾಗವನ್ನು, ಕಾರ್ಮಿಕರಲ್ಲದ ದುಡಿಯುವ ವರ್ಗವನ್ನು ಸಜ್ಜುಗೊಳಿಸುವ, ಶಿಕ್ಷಣ ನೀಡುವ ಬಲಪಡಿಸುವ ಕಾರ್ಯದಲ್ಲಿ ಬಳಸಬಹುದು ಮತ್ತು ಬಳಸಬೇಕು. ಈ ಮಾರ್ಕ್ಸ್‌ವಾದೀ ಲೆನಿನ್‌ವಾದೀ, ಚಿಂತನೆಯನ್ನೇ ಬಲ ಸಮಯ ಸಾಧಕರು ಮತ್ತು "ಎಡ" ಸಂದರ್ಭಸಾಧಕರು ಬೇರೆ ಬೇರೆ ರೀತಿಗಳಲ್ಲಿ ಅಲ್ಲಗಳೆಯುವುದು.

ಭಾರತದ ಕಮ್ಯೂನಿಸ್ಟರಲ್ಲಿ ಪಾರ್ಲಿಮೆಂಟರಿ ಕೆಲಸದ ಬಗ್ಗೆ ಬಲ ಸಮಯ ಸಾಧಕ ದೃಷ್ಟಿಕೋನ ಮೂಡಿದ್ದು 1952 ರ ಮೊದಲನೇ ಸಾರ್ವತ್ರಿಕ ಮತದಾನದ ನಂತರ. ಆಗಿನ ಐಕ್ಯ ಭಾರತ್ ಕಮ್ಯೂನಿಸ್ಟ್ ಪಕ್ಷ ಮತ್ತು ಇತರ ಮಿತ್ರ ಪಕ್ಷಗಳು ನಾಲ್ಕು ರಾಜ್ಯಗಳಲ್ಲಿ- ತಿರುವಾಂಕೂರು ಕೊಚ್ಚಿನ್, ಮದ್ರಾಸ್ ಹೈದರಾಬಾದ್, ಬಂಗಾಳಗಳಲ್ಲಿ ಆಶ್ಚರ್ಯಕರ ವಿಜಯವನ್ನು ಗಳಿಸಿದುವು. ಮದ್ರಾಸ್ ಮತ್ತು ತಿರುವಾಂಕೂರು ಕೊಚ್ಚಿನ್‌ಗಳಲ್ಲಿ ಅಧಿಕಾರದ ಹೊಸ್ತಿಲಿನಲ್ಲಿ ಮತ್ತು ಹೈದರಾಬಾದ್ ಮತ್ತು ಬಂಗಾಳದಲ್ಲಿ ಪ್ರಮುಖ ವಿರೋಧ ಪಕ್ಷವಾಗಿತ್ತು. ಕೇಂದ್ರದಲ್ಲಿ ಸಿಪಿಐ ಮುಖ್ಯ ವಿರೋಧ ಗುಂಪಾಗಿತ್ತು. ಪಕ್ಷದ ದೀರ್ಘ ಆಂತರಿಕ ಹೋರಾಟದ ಹಿನ್ನೆಲೆಯಲ್ಲಿ ಮತ್ತು ಬಲ ಮತ್ತು ಎಡ ಸಮಯ ಸಾಧಕತನಗಳ ಸೋಲೊಪ್ಪುವ ಮೊದಲು ಬಂದ ಈ ವಿಜಯಗಳು ಪಾರ್ಲಿಮೆಂಟರಿ ರೂಪದ ಹೋರಾಟಗಳ ಮೇಲೆಯೇ ಪೂರ್ಣವಾಗಿ ಆಧಾರಿತವಾದ ಬಲ ಸಮಯ ಸಾಧಕತನದ ಬೀಜ ಪಕ್ಷದಲ್ಲಿ ಬಿತ್ತಲ್ಪಟ್ಟಿತು.

ಮೊದಲ ಸಾರ್ವತ್ರಿಕ ಚುನಾವಣೆಯ ನಂತರ ಐದು ವರ್ಷಗಳಲ್ಲಿ ನಡೆದ ಎರಡು ಬೆಳವಣಿಗೆಗಳು ಈ ಪ್ರಕ್ರಿಯೆಗೆ ಒತ್ತು ಕೊಟ್ಟವು.

ಮೊದಲನೆಯದು ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ 20 ನೆಯ ಅಧಿವೇಶನದ ಕರೆ. ಅನೇಕ ದೇಶಗಳ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳಿಗೆ ದಾರಿತಪ್ಪಿಸಿದ ವಿಶ್ವ ಕಮ್ಯೂನಿಸ್ಟ್ ಚಳುವಳಿಗೆ ಕೊಟ್ಟ ಹೊಸ ದೃಷ್ಟಿಕೋನ. ಲೆನಿನ್ ಮಾರ್ಗವಾದ ಪಾರ್ಲಿಮೆಂಟಿನ ಹೊರಗಿನ ಹೋರಾಟಕ್ಕೆ ಅಧೀನವಾಗಿ ಒಳಗಿನ ಹೋರಾಟಗಳನ್ನು ನಡೆಸುವ ದಾರಿಯನ್ನೇ ತಪ್ಪಿಸಿತು. "ಆಂತರಿಕ ಸಂಘರ್ಷ (ಸಿವಿಲ್ ವಾರ್) ಅನಿವಾರ್ಯವಲ್ಲ," "ಅನೇಕ ದೇಶಗಳಲ್ಲಿ ಶಾಂತಿಯುತ ಸಮಾಜ ಬದಲಾವಣೆ" ಎಂಬ ಅನೇಕ ಹೊಸ ಸಿದ್ಧಾಂತಗಳು ಲೆನಿನ್‌ರ ವಾದವನ್ನು ಅಲ್ಲಗಳೆಯುವಂತಹ ವ್ಯಾಖ್ಯಾನಗಳನ್ನು ನೀಡಬಹುದಾಗಿದ್ದುವು ಮತ್ತು ಅದೇ ರೀತಿಯ ವ್ಯಾಖ್ಯಾನಗಳನ್ನು ನೀಡಲಾಯಿತು.

ಎರಡನೆಯ ಪ್ರಮುಖ ಬೆಳವಣಿಗೆ 1957 ರ ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಸಿಪಿಐ ಮತ್ತು ಇತರ ಮಿತ್ರ ಪಕ್ಷಗಳು ಗಣನೀಯ ವಿಜಯಗಳಿಸಿ ಸರಕಾರ ಸ್ಥಾಪಿಸಿದ್ದು. ಈಗಾಗಲೇ ಪಾರ್ಲಿಮೆಂಟ್ ವಾದದ ಸಮಯ ಸಾಧಕ ದೃಷ್ಟಿಕೋನದ ಬೀಜಗಳು ಸಿಪಿಐ ನಲ್ಲಿ ಮೊಳೆತಿರುವ ಹಿನ್ನೆಲೆಯಲ್ಲಿ ಕೇರಳದ ಬೆಳವಣಿಗೆ ಸಿ.ಪಿ.ಎಸ್.ಯು.ವಿನ ವಾದಕ್ಕೆ ಸಮರ್ಥನೆಯೆಂದು ಬಣ್ಣಿಸಲಾಯಿತು ಮತ್ತು ಭಾರತದ ಇತರ ರಾಜ್ಯಗಳು ಅನುಸರಿಸಬೇಕಾದ ಮಾದರಿಯೆಂದು ಘೋಷಿಸಲಾಯಿತು. 1957 ರಲ್ಲಿ ಕೇರಳ, 1962 ರಲ್ಲಿ ಇತರ ಕೆಲವು ರಾಜ್ಯಗಳು, ಕೊನೆಗೆ ಕೇಂದ್ರ-ಇಂತಹ ಹಗಲುಗನಸನ್ನು ಸಿಪಿಐ ಯು ತೋರಿಸಿದೆ. ಭಾರತದ ಶಾಂತಿಯುತ ಬದಲಾವಣೆಯ ಹಾದಿ ಎಂದು ಜನತೆಯ ಮುಂದೆ ಮಂಡಿಸಲಾಯಿತು. ಇದು ಹೊಸ ತಲೆಮಾರಿನ

(5ನೇ ಪುಟ ನೋಡಿ)

ಚೀನಾ - ಭಾರತೀಯ ಪ್ರವಾಸಿಗನೊಬ್ಬನ ಕಿರುಚಿತ್ರ

ಲೇಖಕ : ಕೃಷ್ಣ ಕ್ರಿಪಲಾನಿ

ಶ್ರೀ ಕೃಷ್ಣ ಕ್ರಿಪಲಾನಿ ಇವರು ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾದ ಚೇರ್‌ಮನ್‌ರಾಗಿ ಇತ್ತೀಚಿಗೆ ಚೀನಕ್ಕೆ ಭೇಟಿ ಕೊಟ್ಟ ಭಾರತೀಯ ನಿಯೋಗವೊಂದರ ಸದಸ್ಯರಾಗಿದ್ದರು. ಈ ಲೇಖನದ ಒಂದಿಷ್ಟು ವಿಸ್ತೃತ ಮೂಲವು ಮುಂಬೈಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಪ್ರಸ್ತುತ ಲೇಖನವನ್ನು "ಚೈನಾ ರೀಕನ್‌ಸ್ಟ್ರಕ್ಸ್" ಈ ಚೀನಿ ಪತ್ರಿಕೆಯ ಜನವರಿ 1984 ರ ಸಂಚಿಕೆಯಿಂದ ಅನುವಾದಿಸಲಾಗಿದೆ.

ಚೀನವು ಮೊದಲಿನಿಂದಲೂ ಒಂದು ಕಲ್ಪನಾರವ್ಯ ನಾಡೆಂದೇ ಹೆಸರು ಪಡೆದಿದೆ. ಈ ದೃಷ್ಟಿಯಲ್ಲಿ ಅದು ಭಾರತಕ್ಕಿಂತ ಒಂದು ತೂಕ ಹೆಚ್ಚೆಂದು ಹೇಳಬಹುದು. ಹೆಚ್ಚು ವಿಸ್ತಾರದ ಗಾತ್ರ, ಅಧಿಕ ಜನಸಂಪತ್ತು ಹಾಗೂ ಹೆಚ್ಚು ದೀರ್ಘಕಾಲೀನ ಇತಿಹಾಸವನ್ನು ಹೊಂದಿದ ಈ ದೇಶ ಕಳೆದ 3500 ವರ್ಷಗಳಿಂದ ಪರಕೀಯ ಆಕ್ರಮಣ ಮತ್ತು ಆಂತರಿಕ ಕಲಹಗಳು ತಂದಿಟ್ಟ ವಿನಾಶಗಳನ್ನು ಮೆಟ್ಟಿನಿಂತು-ತನ್ನದೇ ಆದ ಅತಿವಿಶಿಷ್ಟ ಸಾಂಸ್ಕೃತಿಕ ಏಕಾತ್ಮತೆಯನ್ನು ಮುಂದುವರಿಸಿಕೊಂಡು ಬಂದಿದೆ.

ನನಗೆ ನೆನಪಾಗುತ್ತವೆ, ಕವಿ ರವೀಂದ್ರರು ತಮ್ಮ ಅನೇಕ ಸಮುದ್ರಯಾನಗಳಲ್ಲೊಂದರಲ್ಲಿ ಹಾಂಗ್‌ಕಾಂಗ್ ಬಂದರಿನಲ್ಲಿ ಚೀನಿ ಕೆಲಸಗಾರರನ್ನು ಅವರ ಬೆಳಕಿನಲ್ಲಿ ಹೊಳೆಯುವ ಬರಿಮೈಗಳನ್ನು ಕಂಡು ತಮ್ಮ ದಿನಚರಿಯಲ್ಲಿ ಬರೆದಿಟ್ಟ ಮಾತುಗಳು: "ಅವರ ಶರೀರಗಳು ತೆಳುವಾಗಿದ್ದರೂ ಅತ್ಯುತ್ಕೃಷ್ಟ ಸೌಷ್ಠವ ಹೊಂದಿದ್ದವು. ಅನಾವಶ್ಯಕವೆಂಬುದೇನೂ ಅವುಗಳಲ್ಲಿ ನನಗೆ ಗೋಚರಿಸಲಿಲ್ಲ .... ಕೊಳಲಿನಿಂದ ಸಂಗೀತ ಹೊರಹೊಮ್ಮುವಂತೆಯೇ ಅವರ ಶರೀರಗಳಿಂದ ಶ್ರಮವು ಸ್ಪಂದಿಸುತ್ತಿತ್ತು. ಅಂಥ ಶರೀರಬಲ ಮತ್ತು ಕುಶಲತೆಗಳು ಒಂದೇ ಸ್ಥಳದಲ್ಲಿ ಒಗ್ಗೂಡಿರುವುದನ್ನು ಕಂಡ ನನಗೆ ಈ ಮಹಾನ್ ರಾಷ್ಟ್ರದ ಎಲ್ಲೆಡೆಗಳಲ್ಲಿ ಅದೆಷ್ಟು ಶಕ್ತಿ ಸಂಚಯವಾಗಿರಬಹುದೆಂದು ಮನದಟ್ಟಾಯಿತು." ಇವು ಚೀನದ ವಿಮೋಚನೆಗಿಂತ 20 ವರ್ಷ ಮೊದಲು ಬರೆಯಲ್ಪಟ್ಟ ಮಾತುಗಳು.

ಸಾಮಾನ್ಯ ಭಾಷೆ ಹಾಗೂ ಲಿಪಿಗಳಿಂದ ಒಂದುಗೂಡಿಸಲ್ಪಟ್ಟ ಹಾಗೂ ಜಾತಿ ಧರ್ಮಗಳಿಂದ ಹರಿದುಹಂಚಿಹೋಗಿರದ ಈ ನಾಡು ಹಾಗೂ ಅಲ್ಲಿಯ ನಾಡಿಗರನ್ನು ನೋಡಬೇಕೆಂಬ ಆಸೆ ನನ್ನಲ್ಲಿ ಮೊದಲಿನಿಂದಲೂ ಇತ್ತು. ಆದರೆ ತಾನಾಗಿಯೇ ಸ್ವಇಚ್ಛೆಯಿಂದ ಅಲ್ಲಿ ಹೋಗುವುದು ಸಾಧ್ಯವಿರಲಿಲ್ಲ.

ಸುದೈವದಿಂದ ಭಾರತ ಹಾಗೂ ಚೀನ ಉಭಯದೇಶಗಳ ನಡುವಿನ ಸಾಂಸ್ಕೃತಿಕ ಒಡಂಬಡಿಕೆಯಿಂದಾಗಿ ಭಾರತೀಯ ಪ್ರಕಾಶಕರ ನಿಯೋಗವೊಂದನ್ನು ಚೀನಾ ದೇಶಕ್ಕೆ ಇತ್ತೀಚೆಗೆ ಆಮಂತ್ರಿಸಲಾಯಿತು. ನ್ಯಾಷನಲ್ ಬುಕ್‌ಟ್ರಸ್ಟಿನ ಚೇರ್‌ಮನ್‌ನಾಗಿ ನಾನೂ ಈ ನಿಯೋಗದ ಸದಸ್ಯನಾಗಿದ್ದೆ.

ನಮ್ಮ ಎರಡುವಾರಗಳ ಚೀನಾ ವಾಸ್ತವ್ಯದಲ್ಲಿ ನಾವು ನಮ್ಮ ಚೀನೀ ಪ್ರಕಾಶಕಮಿತ್ರರೊಡನೆ ಉಪಯುಕ್ತ, ಬಿಚ್ಚುಮನಸ್ಸಿನ ಹಾಗೂ ನಿರಾತಂಕ ಮಾತುಕತೆಗಳನ್ನು ನಡೆಸಿದೆವು. ಕಳೆದ ವರ್ಷ ಭಾರತದಲ್ಲಿ 17000 (ಎಲ್ಲಭಾಷೆಗಳನ್ನು ಸೇರಿಸಿ) ಪುಸ್ತಕಗಳು ಪ್ರಕಾಶಿತಗೊಂಡರೆ ಚೀನವು 21000 ಪುಸ್ತಕಗಳನ್ನು ಹೊರತಂದಿರುವುದನ್ನು ತಿಳಿದು ನಾವು ಪ್ರಭಾವಿತಗೊಂಡೆವು. ನಮ್ಮನ್ನು ಇದಕ್ಕೂ ಹೆಚ್ಚು ಪ್ರಭಾವಿತಗೊಳಿಸಿದ ಸಂಗತಿಯೆಂದರೆ ಬಾಲಸಾಹಿತ್ಯದ ಪ್ರಕಾಶನದಲ್ಲಿ ಅವರ ಸಾಧನೆ. ಮಕ್ಕಳಿಗಾಗಿ ಅಲ್ಲಿ ತಯಾರಿಸಲಾದ ಪುಸ್ತಕಗಳ ಸಂಖ್ಯೆ ಭಾರತಕ್ಕಿಂತ ಹೆಚ್ಚಾಗಿತ್ತಷ್ಟೇ ಅಲ್ಲ, ಮುದ್ರಣ ಹಾಗೂ ಚಿತ್ರಣ ಎರಡರಲ್ಲೂ ಅವು ತುಂಬಾ ಶ್ರೇಷ್ಠ ಮಟ್ಟದಾಗಿದ್ದವು. ಇತರೆ ಪುಸ್ತಕಗಳಲ್ಲೂ ಚೀನವು ವಿಜ್ಞಾನ ಹಾಗೂ ತತ್ವಜ್ಞಾನಕ್ಕೆ ಸಂಬಂಧಿಸಿ ಹೆಚ್ಚು ಪುಸ್ತಕಗಳನ್ನು ಹೊರತರುತ್ತದೆ.

ಚೀನೀಯರು ತಮ್ಮ ಮಾಧ್ಯಮಿಕ ಶಾಲೆಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷ್ ಕಲಿಸುವುದರಲ್ಲಿ ತಪ್ಪೇನು ಕಾಣದಿರುವುದನ್ನು, ಅಷ್ಟೇ ಅಲ್ಲ, ಜ್ಞಾನವೃದ್ಧಿಗಾಗಿ ಅವರು ತುಂಬಾ ಉತ್ಸುಕರಾಗಿರುವುದನ್ನು ಕಂಡು ನನಗೆ ಸಂತೋಷವೆನಿಸಿತು. ಅವರು ಇಂಗ್ಲೀಷನ್ನು ವಸಾಹತು ಯುಗದ ಬಳುವಳಿಯೆಂದು ಕಾಣದೇ ತಮ್ಮ ಹಾಗೂ ಇತರ ರಾಷ್ಟ್ರಗಳ ನಡುವಿನ ಉಪಯೋಗಕಾರಿ ಸೇತುವೆಯೆಂದೇ ಅದನ್ನು ಸ್ವಾಗತಿಸುತ್ತಾರೆ. ನಿಜವೆಂದರೆ ಅವರ ವಿದೇಶೀ ಭಾಷೆಗಳ ಮುದ್ರಣಾಲಯವು ಇಂಗ್ಲೀಷ್, ಫ್ರೆಂಚ್ ಜರ್ಮನ್, ಜಪಾನೀಸ್, ಉರ್ದು, ಹಾಗೂ ಇತರ ಭಾಷೆಗಳಲ್ಲಿ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತದೆ.

ಚೀನದಲ್ಲಿ 200 ಕ್ಕೂ ಮಿಕ್ಕಿ ಪ್ರಕಾಶನ ಸಂಸ್ಥೆಗಳಿದ್ದರೂ. ಝಿನ್ ಹುಆ ಪುಸ್ತಕಾಲಯ ಇದೊಂದೇ ಅವುಗಳ ಬಟವಾಡೆ ಕೇಂದ್ರವಾಗಿದ್ದು ಅದು ದೇಶದಾದ್ಯಂತ 8000ಕ್ಕೂ ಹೆಚ್ಚು ಶಾಖೆಗಳನ್ನು, ಪುಸ್ತಕದಂಗಡಿಗಳನ್ನು ಹೊಂದಿದೆ. ನಾವು ಭೇಟಿಯಿತ್ತ ಪುಸ್ತಕದಂಗಡಿಗಳು ಚೀನೀ ಪುಸ್ತಕಗಳಿಂದ ತುಂಬಿ ಹೋಗಿದ್ದವು. ಹಾಗೂ ಗ್ರಾಹಕರಿಂದ ಕಿಕ್ಕಿರಿದು ತುಂಬಿದ್ದವು. ಅವರಲ್ಲಿ ಮಕ್ಕಳೂ ದೊಡ್ಡ ಸಂಖ್ಯೆಯಲ್ಲಿ ಇದ್ದರು.

ನ್ಯಾಶನಲ್ ಬುಕ್‌ಟ್ರಸ್ಟ್ ಆಫ್ ಇಂಡಿಯಾ ಕುರಿತು ನನ್ನಲ್ಲಿದ್ದ ಗರ್ವ ಅಲ್ಲಿ ಮಾರಾಟಕ್ಕಿಟ್ಟ ಪುಸ್ತಕಗಳು ನಮ್ಮಲ್ಲಿಯ ಪುಸ್ತಕಗಳಿಗಿಂತ ಅತಿ ಕಡಿಮೆ ಬೆಲೆಯವು ಎಂಬುದನ್ನು ನೋಡಿ ಕುಗ್ಗಿ ಹೋಯಿತು. ಮಕ್ಕಳ ಪುಸ್ತಕಗಳು ಹೆಚ್ಚು ಸಂಖ್ಯೆಯಲ್ಲಿ, ಕಡಿಮೆ ಬೆಲೆಯಲ್ಲಿ ಹೆಚ್ಚು ಆಕರ್ಷಕ ರೂಪದಲ್ಲಿ ಉಪಲಬ್ಧವಿದ್ದವು. ಆದರೆ ಪುಸ್ತಕದ ಸಾಲುಗಳಲ್ಲಿ ರವೀಂದ್ರನಾಥ ಟಾಗೋರರವರ ಚೀನೀ ಅನುವಾದದ ಒಂದೂ ಪುಸ್ತಕವನ್ನು ಕಾಣದ ನಾನು ನಿರಾಶಗೊಂಡೆ. ಸದ್ಯ ಅತಿ ಹೆಚ್ಚು ಬೇಡಿಕೆಯಲ್ಲಿರುವ ಭಾರತೀಯ ಲೇಖಕರೆಂದರೆ ಪ್ರೇಮಚಂದ್. ಅವರ ಪುಸ್ತಕಗಳು ಚೀನೀ ಭಾಷೆಯಲ್ಲಿ ಮಾರಾಟಕ್ಕಿದ್ದವು.

ನಾನಿಲ್ಲಿ ಪ್ರಮುಖ ಪ್ರವಾಸಸ್ಥಾನಗಳಾದ ಬೀಜಿಂಗಿನ ಹೊರಭಾಗದಲ್ಲಿರುವ ಮಹಾಗೋಡೆ ಅಥವಾ ಒಳಭಾಗದಲ್ಲಿರುವ "ನಿಷೇಧಿತ ಶಹರು" (Forbidden city) ಇವುಗಳ ಬಗ್ಗೆ ಹೇಳಲಿಚ್ಛಿಸುವುದಿಲ್ಲ. ಏಕೆಂದರೆ ಇತರರು ಅವುಗಳನ್ನು ವರ್ಣಿಸಿ ಹೇರಳವಾಗಿ ಬರೆದಿದ್ದಾರೆ. ಬದಲಾಗಿ ಮಹಾನ್ ಚೀನೀ ಪ್ರವಾಸಿಗ ಯುವಾನ್ ಝುಂಗ ನನ್ನು ಆಹ್ವಾನಿಸಿ ಅಧಿಕಾರಸ್ಥಾನ ಕೊಟ್ಟು ನೇಮಕಗೊಳಿಸಿದ್ದ ಆಶ್ರಮವೊಂದಕ್ಕೆ ನಾವು ಭೆಟ್ಟಿ ಕೊಟ್ಟ ಬಗ್ಗೆ ಉಲ್ಲೇಖಿಸಬಯಸುತ್ತೇನೆ. ಅವನ ಚಿತ್ರವನ್ನು ಗೋಡೆಯ ಮೇಲೆ ತೂಗುಹಾಕಲಾಗಿತ್ತು. ಈ ಸಾಹಸಿ ಸನ್ಯಾಸಿ ಕಾಲ್ನಡಿಗೆಯಿಂದ ಜಗತ್ತಿನ ಅತಿ ಕಷ್ಟಕರವಾದ ಪ್ರದೇಶಗಳ ಮೂಲಕ ಸಾವಿರಾರು ಮೈಲು ಸುತ್ತಿ ನಾವೇ ಇಲ್ಲಿ ಮರೆತುಹೋಗಿರುವ ಬೌದ್ಧ ಭಾರತವನ್ನು ಶೋಧಿಸಲು ಕೈಗೊಂಡ ಪ್ರವಾಸವನ್ನು ನೆನಪಿಸಿಕೊಂಡಾಗ ನಾನು ಭಾವಪರವಶನಾಗದೇ ಇರಲಿಲ್ಲ.

ಅಲ್ಲಿಯ ಬೌದ್ಧ ಮಂದಿರವೊಂದರಲ್ಲಿ ಹೆಚ್ಚಾಗಿ ಮುದುಕಿಯರು ಹಾಗೂ ಹುಡುಗಿಯರೇ ಇದ್ದ ಭಕ್ತರನ್ನು ಕಂಡೆ. ಅವರು ಅಗಾಧಗಾತ್ರದ ಬುದ್ಧನ ಮೂರ್ತಿಯೊಂದರ ಎದುರು ಮತ್ತೆ ಮತ್ತೆ ಬಾಗಿ ಪೂಜೆ, ಪ್ರಾರ್ಥನೆ ನಡೆಸಿದ್ದರು. ಅಲ್ಲಿಯ ಕಂಚು ಹಾಗೂ ಪಿಂಗಾಣಿ ಮೂರ್ತಿ ಹಾಗೂ ಪಾತ್ರೆಗಳನ್ನು ಅಚ್ಚುಕಟ್ಟಾಗಿಯೂ ಅಚ್ಚರಿಗೊಳಿಸುವಷ್ಟು ಸ್ವಚ್ಛವಾಗಿಯೂ ಜೋಡಿಸಲಾಗಿತ್ತು. ನಮ್ಮ ಪುರಿಯಲ್ಲಿಯ ಜಗನ್ನಾಥ ದೇವಾಲಯಕ್ಕಿಂತ ಅದೆಷ್ಟು ಭಿನ್ನ !

ಪ್ರೇಕ್ಷಣೀಯ ಸ್ಥಳಗಳನ್ನು ಸುತ್ತುವುದರಲ್ಲಾಗಲಿ ಅಥವಾ ಪುಸ್ತಕಗಳ ಮಾರಾಟದಲ್ಲಾಗಲಿ ನನಗೆ ವಿಶೇಷ ಆಸಕ್ತಿಯಿರಲಿಲ್ಲ. ನನ್ನ ಪ್ರಮುಖ ಆಸ್ಥೆ ರಸ್ತೆಯ ಮೇಲಿನ ಜನಗಳ ಜೀವನವನ್ನು ವೀಕ್ಷಿಸುವುದರಲ್ಲಿತ್ತು. ಅವರ ಮನೆಗಳಿಗೆ ಭೆಟಿಕೊಡುವ ಅವಕಾಶಗಳಿರಲಿಲ್ಲ. ನಮ್ಮ ಬಳಿ ಕಾರುಗಳಿದ್ದವು. ಹಾಗೂ ನಮಗೆ ಬೇಕಾದಲ್ಲಿ ಹೋಗಲು ಸ್ವಾತಂತ್ರ್ಯವಿತ್ತು. ಎಲ್ಲಕ್ಕಿಂತ ಹೆಚ್ಚು ನನ್ನ ಮನಸೆಳೆದ ದೃಶ್ಯವೆಂದರೆ – ಹಾಗೂ ನಾನು ಅತ್ಯಂತ ಗಮನಪೂರ್ವಕವಾಗಿ ನೋಡುತ್ತಿದ್ದೆ – ನಾನು ಎಲ್ಲಿಯೂ ಒಬ್ಬನೇ ಒಬ್ಬ ಭಿಕ್ಷುಕನನ್ನೂ ಕಾಣಲಿಲ್ಲ.

ಒಬ್ಬ ಭಿಕ್ಷುಕನನ್ನೂ ಕೂಡ ಕಾಣಲು ನನಗೆ ಸಾಧ್ಯವಾಗಲಿಲ್ಲವಷ್ಟೇ ಅಲ್ಲ, ಯಾವೊಬ್ಬ ಗಂಡಸು, ಹೆಂಗಸು ಅಥವಾ ಮಗು ಹರಕು ಬಟ್ಟೆಗಳಲ್ಲಾಗಲಿ ಹಸಿದ ಮುಖಚರ್ಯೆಯಲ್ಲಾಗಲಿ, ಉಬ್ಬು ಹೊಟ್ಟೆಯ ಸೊರಗಿದ ದೇಹದ ಅನಾರೋಗ್ಯ ಸ್ಥಿತಿಯಲ್ಲಾಗಲಿ ಇರುವುದನ್ನು ನಾನು ಕಾಣಲಿಲ್ಲ. ಈ ದೃಶ್ಯ ನಮ್ಮ ಶಹರುಗಳಲ್ಲಿ ಸರ್ವೇಸಾಮಾನ್ಯ. ಅತ್ಯಂತ ಬೆಲೆಬಾಳುವ ಥಳಕಿನ ಬಟ್ಟೆಯಲ್ಲಿರುವ ಯಾತನ್ನೂ ಕೂಡ ನಾನು ಕಾಣಲಿಲ್ಲ. ನಿಜಕ್ಕೂ ನನ್ನ ಮನಸ್ಸನ್ನು ಆಳವಾಗಿ ಸ್ಪರ್ಶಿಸಿದ ದೃಶ್ಯವೆಂದರೆ ಅಲ್ಲಿಯ ಮನುಷ್ಯಜೀವನದಲ್ಲಿಯ ಎದ್ದು ಕಾಣುವ ಸ್ಪಷ್ಟವಾದ ಸರಳತೆ, ಹಾಗೂ ಎಲುಬು ಕೊರೆಯುವ ಬಡತನ ಮತ್ತು ಕಣ್ಣುಕುಕ್ಕುವ ಐಶ್ವರ್ಯಗಳ ನಡುವಿನ ವ್ಯತ್ಯಾಸದ ಸಂಪೂರ್ಣ ಅಭಾವ.

ಚೀನೀ ಜನರ ಮನೆಗಳಿಗೆ ಭೆಟ್ಟಿಕೊಡಲು ನನ್ನ ಬಳಿ ಸಮಯವಿರಲಿಲ್ಲವಾದರೂ, ಯಾವ ರೀತಿ ಹೊಟ್ಟೆಗೆ ಹಾಗೂ ಬಟ್ಟೆಗೆ ಸಾಕಷ್ಟಿರದ ಒಬ್ಬ ಪ್ರಜೆಯೂ ಇಲ್ಲವೋ ಅದೇ ರೀತಿ ಇರಲು ಮನೆಯಿಲ್ಲದವರೂ ಯಾರೂ ಇಲ್ಲ ಎಂದು ನನಗೆ ಹೇಳಲಾಯಿತು. ಅದೇ ಹೆಣ್ಣಿನ ಅಂಗಾಂಗಳನ್ನು ಹಾಗೂ ಅಶ್ಲೀಲ ಕಾಮ ಭಂಗಿಗಳನ್ನು ಪ್ರದರ್ಶಿಸುವ ಸಿನಿಮಾ ಅಥವಾ ನಾಟಕಗಳ ಒಂದು ಭಿತ್ತಿ ಚಿತ್ರವೂ ಇರದ್ದನ್ನು ನಾನು ಗಮನಿಸದೆ ಇರಲಿಲ್ಲ. ಸೂಳೆಗಾರಿಕೆ ಪೂರ್ತಿ ನಿರ್ನಾಮಗೊಂಡಿದೆಯೆಂದು ನನಗೆ ಭರವಸೆ ನೀಡಲಾಯಿತು. ಭಾರಿ ಒಡವೆ ಆಡಂಬರಗಳು ಹಾಗೂ ಝಗಮಗಿಸುವ ವೇಷಾಲಂಕಾರಗಳ ಸ್ತ್ರೀಯರನ್ನು ನಾನೆಲ್ಲೂ ನೋಡಲಿಲ್ಲ.

ಬಡವರ ಶೋಷಣೆಯಿಲ್ಲದ, ಒಬ್ಬನು ಮತ್ತೊಬ್ಬನ ಬೆನ್ನು ಮುರಿಯಲು ಸಾಧ್ಯವಿರದ, ಶ್ರೀಮಂತಿಕೆಯ ಅಶ್ಲೀಲ ಪ್ರದರ್ಶನವಿರದ, ಭೋಗವಿಲಾಸಗಳಲ್ಲಿ ತನ್ಮಯವಾಗುವುದು ಸಾಧ್ಯವಿಲ್ಲದ ಹಾಗೂ ಯಾವುದೇ ರೀತಿಯ ಲಿಂಗಭೇಧವಿಲ್ಲದ ಈ ನಾಡನ್ನು ನೋಡಿ ಆನಂದವಾಯಿತು.

ವಿರಕ್ತತೆ ಅಥವಾ ಕಠೋರ ಮಿತವ್ಯಯದ ಪ್ರದರ್ಶನವೂ ಅಲ್ಲಿರಲಿಲ್ಲ. ಎಲ್ಲೆಡೆಗೂ ಬಾಳಿನ ಆರೋಗ್ಯಮಯ ಹಾಗೂ ಸಧೃಢ ರಸಾಸ್ವಾದ; ಕೈಯಲ್ಲಿ ಕೈ ಹಿಡಿದು ನಕ್ಕು ನಲಿಯುತ್ತ ಐಸ್‌ಕ್ರೀಮ್ ತಿನ್ನುವುದರಲ್ಲಾಗಲಿ, ಅಥವಾ ಕೋಕಾ ಕೋಲಾ ಇಲ್ಲವೇ ಆರೇಂಜ್ ಕುಡಿಯುವುದರಲ್ಲಾಗಲಿ ಮಗ್ನರಾದ ಹೆಣ್ಣು ಗಂಡುಗಳು, ಶಾಂಘಾಯಿಯಲ್ಲಿ ಪ್ರಸಿದ್ಧ ಚೀನೀ ಕಸರತ್ತುಗಾರರನ್ನು ಹಾಗೂ ಚೆಂಗ್ಡು ಮತ್ತು ಕ್ಯಾಂಟನ್ ಶಹರುಗಳಲಿ ಆಪೆರಾ ಮತ್ತು ಬ್ಯಾಲೆ ನೃತ್ಯಗಳನ್ನು ನಾವು ವೀಕ್ಷಿಸಿದೆವು. ಚೀನೀ ಜನ

(7ನೇ ಪುಟ ನೋಡಿ)

[4ನೇ ಪುಟದಿಂದ]

ಕಮ್ಯೂನಿಷ್ಟರಿಗೆ ಶಿಕ್ಷಣ ನೀಡುವ ಮತ್ತು ಹಳೆಯ ತಲೆಮಾರಿನವರಿಗೆ ಪುನರ್‌ಶಿಕ್ಷಣ ನೀಡುವ "ಸೃಷ್ಟಿಶೀಲ ಮಾರ್ಕ್ಸ್‌ವಾದ" ಎಂದು ಹೆಸರು ಪಡೆಯಿತು.

"ಎಡ" ಸಂದರ್ಭಸಾಧಕತನ

ಈ ಬಲ ಸಮಯಸಾಧಕ ವಾದದ ಪರಿಣಾಮವಾಗಿ ಪಾರ್ಲಿಮೆಂಟ್ ಹೊರಗಿನ ಹೋರಾಟಗಳ ಬೆಳವಣಿಗೆಗೆ ಪಾರ್ಲಿಮೆಂಟ್ ರಂಗದ ಹೋರಾಟವನ್ನು ಬಳಸಿಕೊಳ್ಳುವ ದಾರಿಯನ್ನೇ ನಿರಾಕರಿಸಿ. ಎಡ ಸಮಯಸಾಧಕತನಕ್ಕೆ ಸಹಜವಾಗಿಯೇ ಹಾದಿ ಮಾಡಿಕೊಟ್ಟಿತು. ಬಹಕಾಲ ಪಾರ್ಲಿಮೆಂಟ್ ರಂಗದ ಹೋರಾಟಗಳಿಗೇ ಒತ್ತು ಕೊಟ್ಟಿದ್ದು ನಕ್ಸಲ್‌ಬಾರಿ ಮಾರ್ಗದ ಪಾರ್ಲಿಮೆಂಟ್ ಮತ್ತು ಪಾರ್ಲಿಮೆಂಟ್ ಹೊರಗಿನ ಹೋರಾಟದ ಸೂತ್ರಕ್ಕೆ ಕಾರಣವಾಯಿತು. ಪಾರ್ಲಿಮೆಂಟ್ ರಂಗದ ಕೆಲಸವನ್ನು "ಕ್ರಾಂತಿಗೆ ಬಗೆದ ದ್ರೋಹ" ಎಂದು ಖಂಡಿಸುವ ಬಲಪ್ರಯೋಗದ ಮೇಲೆ ಪೂರ್ಣ ಒತ್ತು ಕೊಟ್ಟು ಏಕೈಕ ಹೋರಾಟದ ವಿಧಾನವಾಗಿ ಬಳಸುವ ದಾರಿಗೆ ಕಾರಣವಾಯಿತು.

ಈ ಎಡ ಸಂದರ್ಭಸಾಧಕ ದೃಷ್ಟಿಕೋನ ಕಾರ್ಮಿಕ ವರ್ಗದ ಮಾನಸಿಕ ಬೆಳವಣಿಗೆ ಮತ್ತು ಪ್ರಜಾಸತ್ತಾತ್ಮಕ ಚಳವಳಿಯ ಬೆಳವಣಿಗೆಯ ಹಾದಿಯಲ್ಲಿನ ತೊಡಕಾಗಿ ಪರಿಣಮಿಸಿದೆ. ಬರಡು ತನವನ್ನು ಸಹ ಬೀರಿ ಮಾಡಿದೆ.

ಸಿ. ಐ. ಟಿ. ಯು. ನಾಲ್ಕನೇ ರಾಜ್ಯ ಸಮ್ಮೇಳನ

ಕಾರ್ಮಿಕ ವರ್ಗದ ರಾಜಕೀಯಕ್ಕೆ ಅಗ್ರಸ್ಥಾನ

[1ನೇ ಪುಟದಿಂದ]

ಸಕ್ರೀಯ ಬೆಂಬಲ ನೀಡುತ್ತ, ಬೆಳೆದು ಬರುತ್ತಿರುವ ಗ್ರಾಮೀಣ ಜನತೆಯ ಹೋರಾಟಗಳಿಗೆ ಸರಿಯಾದ ತಿರುವ ನೀಡುತ್ತ, ರೈತ ಮತ್ತು ಕಾರ್ಮಿಕರ ಸಖ್ಯತೆಯನ್ನು ಬೆಳೆಸುವತ್ತ ಹೆಚ್ಚಿಗೆ ಗಮನವೀಯಲು ಸಿ.ಐ.ಟಿ.ಯು. ವಿನ ರಾಜ್ಯ ಸಮ್ಮೇಳನವು ಗಮನ ಹರಿಸಬೇಕು. ಕಾರ್ಮಿಕ ವರ್ಗದ ಹಾಗೂ ಜನತೆಯ ಐಕ್ಯತೆಗೆ ಮಾರಕವಾಗಿರುವ ಭಾಷೆ, ಜಾತಿ, ಮತ, ಧರ್ಮ ಗಳ ಹೆಸರಲ್ಲಿ ನಡೆಯುವ ಸಂಕುಚಿತವಾದಿ ಚಳುವಳಿ ಮತ್ತು ಚಟುವಟಿಕೆಗಳನ್ನು, ಕಾರ್ಮಿಕ ವರ್ಗವನ್ನು ತಪ್ಪುದಾರಿಗೆಳೆಯಲು ಪ್ರಯತ್ನಿಸುವ ಪರಿಷ್ಕರಣವಾದಿ ಹಾಗೂ ಎಡ ಸಾಹಸವಾದಿ ಪ್ರವೃತ್ತಿಗಳನ್ನೂ, ವಿಚ್ಛಿದ್ರಕಾರಿ ಶಕ್ತಿಗಳನ್ನೂ ವಿರೋಧಿಸಿ ಮುನ್ನಡೆಯಲು ಸಿ. ಐ. ಟಿ. ಯು. ನಾಲ್ಕನೇ ರಾಜ್ಯ ಸಮ್ಮೇಳನವು ಸ್ಫೂರ್ತಿಯನ್ನೀಯಬೇಕು.

ಸಿ.ಐ.ಟಿ.ಯು ನಾಲ್ಕನೇ ರಾಜ್ಯ ಸಮ್ಮೇಳನವು ರಾಜ್ಯದಲ್ಲಿ ಬದಲಾಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಸೇರಲಿದೆ. ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾರ್ಮಿಕರ ವಿರೋಧಿ ಹಾಗೂ ಜನವಿರೋಧಿ ಕಾಂಗ್ರೆಸ್ ಸರಕಾರವನ್ನು ಸೋಲಿಸಿ ಜನತಾಪಕ್ಷದ ಸರಕಾರವನ್ನು ಅಸ್ತಿತ್ವಕ್ಕೆ ತರುವುದರಲ್ಲಿ ರಾಜ್ಯದ ಕಾರ್ಮಿಕ ವರ್ಗ ಪ್ರಾಮುಖ್ಯ ಪಾತ್ರ ವಹಿಸಿದೆ. ಆದರೆ ಕಾರ್ಮಿಕ ವರ್ಗದ ಸಮಸ್ಯೆಗಳಿಗೆ ಪರಿಹಾರ ಒದಗಿಸಿಕೊಡುವುದರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿರುವ ಸರಕಾರವು ಔದಾಸೀನ್ಯತೆಯನ್ನು ತೋರತ್ತಿದೆ. ತನ್ನ ಅಧಿಕಾರದ ಪರಿಮಿತಿಯೊಳಗೆ ಏನೆಲ್ಲಾ ಸಾಧ್ಯವಿದೆಯೋ ಅದನ್ನು ಕಾರ್ಮಿಕ ವರ್ಗ ಮತ್ತು ಇತರೆ ಜನತೆಗೆ ಒದಗಿಸಿಕೊಡುವಂತೆ ರಾಜ್ಯದಲ್ಲಿ ಅಧಿಕಾರದಲ್ಲಿರುವ ಜನತಾ ಪಕ್ಷದ ಸರಕಾರದ ಮೇಲೆ ಒತ್ತಾಯ ಹೇರಲು ಹೋರಾಟಗಳನ್ನು ನಡೆಸುವುದು ಅಗತ್ಯ. ಹಾಗೆ ಮಾಡುವಾಗ ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ಬರಲು ಕಾಂಗ್ರೆಸ್ಸು ನಡೆಸುವ ಎಲ್ಲಾ ಕುತಂತ್ರಗಳನ್ನು ಸೋಲಿಸಲು ಕಾರ್ಮಿಕ ವರ್ಗ ಮುಂದೆ ನಿಲ್ಲಬೇಕು. ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ರಾಷ್ಟ್ರಾದ್ಯಂತ ಬೆಳೆದು ಬರುತ್ತಿರುವ ಹೋರಾಟಗಳನ್ನು ರಾಜ್ಯದಲ್ಲೂ ಯಶಸ್ವಿಯಾಗಿ ನಡೆಸಲು ಸಿಐಟಿಯು ಇನ್ನೂ ಹೆಚ್ಚಿಗೆ ಶ್ರಮಿಸಬೇಕು. ಈ ಎಲ್ಲಾ ಕರ್ತವ್ಯಗಳೊಂದಿಗೆ ವರ್ಗ ರಾಜಕೀಯವನ್ನೂ, ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯನ್ನೂ ರಾಜ್ಯದ ಕಾರ್ಮಿಕ ವರ್ಗದ ಮಧ್ಯೆ ಬೆಳೆಸಲು ಸಿ ಐ ಟಿ ಯು ನಾಲ್ಕನೇ ಸಮ್ಮೇಳನವು ಸ್ಫೂರ್ತಿಯನ್ನು ಕೊಡಬೇಕಾಗಿದೆ. ಈ ಹಿಂದಿನ ಅನುಭವಗಳನ್ನು ಮತ್ತು ಪರಿಸ್ಥಿತಿಯನ್ನು ಅಂದಾಜು ಮಾಡಿಕೊಂಡು, ಈಗಿರುವ ಸಂಘಟನೆಗಳನ್ನು ಭದ್ರಗೊಳಿಸಿ, ಇರದಿರುವ ವಿಭಾಗ ಮತ್ತು ಪ್ರದೇಶಗಳಿಗೆ ಸಂಘಟನೆಯನ್ನು ವಿಸ್ತರಿಸಿ, ಉದ್ಯಮ ಮತ್ತು ಕೈಗಾರಿಕಾವಾರಾಗಿ ಸಂಘಟನೆಗಳನ್ನೂ ಹೋರಾಟಗಳನ್ನೂ ಬೆಳೆಸುತ್ತಾ, ಅಸಂಘಟಿತ ವಿಭಾಗವನ್ನು ಸಂಘಟಿಸುತ್ತಾ, ಸ್ವತಂತ್ರವಾಗಿಯೂ ಜಂಟಿಯಾಗಿಯೂ ಕಾರ್ಯಚರಣೆಗಳನ್ನು ನಡೆಸುತ್ತಾ ಮುನ್ನಡೆಯುವುದಕ್ಕೆ ನಾಲ್ಕನೇ ರಾಜ್ಯ ಸಮ್ಮೇಳನವು ನವ ಚೈತನ್ಯವನ್ನು ತುಂಬಬೇಕು.

ಸಿಐಟಿಯು ನಾಲ್ಕನೇ ರಾಜ್ಯ ಸಮ್ಮೇಳನ ನಡೆಯಲಿರುವ ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿದೆ. ಜಿಲ್ಲೆಯ ಕರಾವಳಿ ಪ್ರದೇಶದುದ್ದಕ್ಕೂ ಹೆಂಚಿನ ಕಾರ್ಖಾನೆಗಳು, ಮಂಗಳೂರು ನಗರದಲ್ಲಿ ಹಿಂದಿನಿಂದಲೇ ಇರುವ ಹಾಗೂ ಇಗೀಗ ಜಿಲ್ಲೆಯ ಒಳಭಾಗಗಳಲ್ಲಿ ಪ್ರಾರಂಭಿಸಲ್ಪಟ್ಟಿರುವ ಗೇರು ಬೀಜ (ಗೋಡಂಬಿ) ಕಾರ್ಖಾನೆಗಳು, ಅತ್ಯಂತ ಹಳೆಯದಾಗಿರುವ ಆದರೆ ಅಲ್ಪಸ್ವಲ್ಪ ಉಳಿದಿರುವ ನೆಯ್ಗೆ ಉದ್ಯಮ, ಜಿಲ್ಲೆಯಲ್ಲಿ ಲಕ್ಷಾಂತರ ಮಂದಿ (ಅದರಲ್ಲೂ ನೂರಕ್ಕೆ ತೊಂಭತ್ತರಷ್ಟು ಮಹಿಳೆಯರು ಮತ್ತು ಬಾಲಕಿಯರು) ಕೆಲಸಗಾರರನ್ನು ಹೊಂದಿರುವ ಬೀಡಿ ಉದ್ಯಮ, ಕೆಲವೇ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿರುವ ರಸಗೊಬ್ಬರದ ಕಾರ್ಖಾನೆ ಮತ್ತು ಪಣಂಬೂರು ಬಂದರು, ಈಗ ಸ್ಥಾಪನೆಯಾಗುತ್ತಲಿರುವ ಕಬ್ಬಿಣದ ಅದುರು ಸಂಸ್ಕರಣ ಕೇಂದ್ರ–ಇವು ಜಿಲ್ಲೆಯ ಮುಖ್ಯ ಔದ್ಯಮಿಕ ಚಿತ್ರವಾಗಿವೆ. ಇದರೊಂದಿಗೆ ಪ್ರೆಸ್, ಮತ್ತು ಇತರ ಸಣ್ಣಪುಟ್ಟ ಉದ್ಯಮಗಳೂ ಬೆಳೆದು ಬರುತ್ತಿವೆ. ಹೋಟೆಲು ಉದ್ಯಮವು ದೊಡ್ಡ ರೀತಿಯಲ್ಲಿ ಬೆಳೆದಿದೆ. ಜಿಲ್ಲೆಯಲ್ಲಿ ಪ್ಲೈವುಡ್ ಕಾರ್ಖಾನೆಗಳೂ ಇವೆ. ಜಿಲ್ಲೆಯಲ್ಲಿ ಸುಮಾರು ಹದಿನೈದು ಸಹಸ್ರ ಎಕರೆ ವಿಸ್ತೀರ್ಣದ ಸರಕಾರಿ ರಬ್ಬರ್ ತೋಟವಿದ್ದು, ಇದರಲ್ಲಿ ಸುಮಾರು 5000 ಮಂದಿ ಸಿಲೋನ್‌ನಿಂದ ವಾಪಸಾಗಿರುವವರು ದುಡಿಯುತ್ತಿದ್ದಾರೆ.

ಹೆಂಚಿನ ಕಾರ್ಮಿಕರು, ಗೇರುಬೀಜ ಕಾರ್ಖಾನೆಯಲ್ಲಿನ ಕಾರ್ಮಿಕರು, ನೆಯ್ಗೆ ಮತ್ತು ಪ್ರೆಸ್ ಕಾರ್ಮಿಕರು, ಬೀಡಿ ಕಾರ್ಮಿಕರು, ಟ್ರಾನ್ಸ್‌ಪೋರ್ಟ್ ಕಾರ್ಮಿಕರು, ಆಟೋ ಚಾಲಕರು, ರಬ್ಬರ್ ತೋಟ ಕೆಲಸಗಾರರು, ಜನರಲ್ ವರ್ಕರ್ಸ್ ಇವೇ ಮೊದಲಾದ ವಿಭಾಗಗಳ ಮಧ್ಯೆ ಸಿಐಟಿಯು ಸಂಘಟನೆ ಬೆಳೆದು ಬಂದಿದೆ. ಬೀಡಿ ಕಾರ್ಮಿಕರ ಮಧ್ಯೆ ಸಿಐಟಿಯು ಸಂಘಟನೆಯೇ ಉಳಿದವಕ್ಕಿಂತ ಪ್ರಬಲವಾಗಿದೆ. ಆದರೆ ಇನ್ನೂ ಅಸಂಖ್ಯಾತ ಬೀಡಿ ಕಾರ್ಮಿಕರು ಸಂಘಟಿತರಾಗಿಲ್ಲ. ಇತ್ತೀಚೆಗೆ ಬೀಡಿ ಕಾರ್ಮಿಕರನ್ನು ಗ್ರಾಮೀಣ ಪ್ರದೇಶಗಳೂ ಸೇರಿದಂತೆ ಜಿಲ್ಲೆಯಾದ್ಯಂತ ಸಂಘಟಿಸುವ ಪ್ರಯತ್ನ ನಡೆದಿದೆ. ಹೆಂಚಿನ ಕಾರ್ಖಾನೆಯಲ್ಲಿ ದುಡಿಯುವ ಬಹುತೇಕ ಮಜೂರರು ಸಿಐಟಿಯು ನೇತೃತ್ವದಲ್ಲಿ ಸಂಘಟಿತರಾಗಿದ್ದು ಈ ಸಂಘಟನೆಯು ಜಿಲ್ಲೆಯ ಸಿಐಟಿಯುವಿನ ಬೆನ್ನೆಲುಬಾಗಿ ಬೆಳೆದು ಬಂದಿದೆ.

ರಾಜ್ಯದಲ್ಲಿ ಸಿಐಟಿಯುವಿಗೆ ಸೇರಿರುವ ಸಂಘಟನೆಗಳ ಪೈಕಿ ಅತ್ಯಂತ ಹಳೆಯವು ಮಂಗಳೂರಲ್ಲಿವೆ. ರಾಜ್ಯದಲ್ಲಿ ಸಿಐಟಿಯು ಸದಸ್ಯತ್ವದಲ್ಲಿ ಒಂದು ದೊಡ್ಡ ಭಾಗ, ಅಂದರೆ ಅರ್ಧಕ್ಕೆ ಸಮೀಪ ದ. ಕ. ಜಿಲ್ಲೆಯದ್ದಾಗಿದೆ.

ಭೌಗೋಲಿಕ, ಚಾರಿತ್ರಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ಜೀವನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದ ಉಳಿದ ಜಿಲ್ಲೆಗಳಿಗಿಂತ ಭಿನ್ನವಾಗಿದೆ. ಈ ಜಿಲ್ಲೆಗೆ ಒಂದು ರೀತಿಯ ಪ್ರತ್ಯೇಕತೆ ಇವೆ, ಈ ಜಿಲ್ಲೆಯಲ್ಲಿ ಕಳೆದ ಬಾರಿಯ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧದ ವಾತಾವರಣದ ಪ್ರಯೋಜನವನ್ನು ಭಾರತೀಯ ಜನತಾ ಪಕ್ಷವು ಪಡೆಯಿತು. ಸಾಂಪ್ರದಾಯಿಕವಾಗಿ ಕಾಂಗ್ರೆಸ್ಸನ್ನೆ ಬೆಂಬಲಿಸುತ್ತಿದ್ದ ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ಜನತೆಯ ಒಂದು ದೊಡ್ಡ ವಿಭಾಗ ಕಾಂಗ್ರೆಸ್ಸಿನ ವಿರುದ್ಧ ನಿಂತು ಕೆಲಸ ಮಾಡಿತು. ಈ ಜಿಲ್ಲೆಯಲ್ಲಿ ಜನತಾ ಪಕ್ಷಕ್ಕೆ ಸಂಘಟನೆ ಮತ್ತು ಅಸ್ತಿತ್ವವೇ ಇದ್ದಿಲ್ಲ. ಮತ್ತು ಈಗಲೂ ಇಲ್ಲ ಎನ್ನಬಹುದು. ಸಂಘಟನೆ ಮತ್ತು ಸಂಪನ್ಮೂಲಗಳಿರುವ ಬಾಜಪವು ಪರಿಸ್ಥಿತಿಯ ಪ್ರಯೋಜನ ಪಡೆಯಿತು. 15 ವಿಧಾನಸಭಾ ಸ್ಥಾನಗಳ ಪೈಕಿ ಅದಕ್ಕೆ ಎಂಟು ಸಿಕ್ಕಿತು. ಕಾರ್ಮಿಕ ವರ್ಗದ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಒಂದು ಸ್ಥಾನ ದೊರೆಯಿತು. ಚುನಾವಣಾ ಪೂರ್ವ ಮತ್ತು ಚುನಾವಣೆಯ ಸಂದರ್ಭದಲ್ಲಿ ಚುರುಕುಗೊಂಡ ಬಹುಸಂಖ್ಯಾತ (ಹಿಂದೂ) ಕೋಮುವಾದಿ ಮತ್ತು ಅಲ್ಪ ಸಂಖ್ಯಾತ ಕೋಮುವಾದಿ ಚಟುವಟಿಕೆಗಳು, ಚುನಾವಣೆ ಮುಗಿದು ಬಾಜಪದ ಬೆಂಬಲವನ್ನು ಪಡೆದು ಜನತಾ ಪಕ್ಷದ ಸರಕಾರವು ಅಸ್ತಿತ್ವಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಇನ್ನೂ ಜೋರಾಗಿ ನಡೆಯಿತು. ಚುನಾವಣಾ ಫಲಿತಾಂಶಗಳು ಮತ್ತು ಬಾಜಪದ ಬೆಂಬಲದಿಂದ ಸರಕಾರವು ರಚಿಸಲ್ಪಟ್ಟಿರುವ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಆರ್.ಎಸ್.ಎಸ್. ಮತ್ತು ವಿಶ್ವ ಹಿಂದೂ ಪರಿಷತ್ತುಗಳ ಚಟುವಟಿಕೆಗಳು ಬಹಳಷ್ಟು ಹೆಚ್ಚಿದುವು. ಮಂಗಳೂರಿನಲ್ಲಿ ಆರ್. ಎಸ್. ಎಸ್.ನ ಬೃಹತ್ ರ‍್ಯಾಲಿ, ಉಜಿರೆಯಲ್ಲಿ ವಿಶ್ವ ಹಿಂದೂ ಪರಿಷತ್ತಿನ ಪ್ರಾಂತೀಯ ಸಮ್ಮೇಳನ ಇವೆಲ್ಲಾ ಅತ್ಯಂತ ವ್ಯಾಪಕ ಪ್ರಚಾರಗಳಿಂದ ನಡೆದುವು. ಈ ಬೆಳವಣಿಗೆಗಳಿಂದ ಗಾಬರಿಗೊಂಡ ಅಲ್ಪ ಸಂಖ್ಯಾತರು ಕಾಂಗ್ರೆಸ್ (ಐ) ಮತ್ತು ಬಾಜಪಕ್ಕೆ ಬದಲಿಯಾಗಿ ಒಂದು ಪ್ರಬಲ ಶಕ್ತಿ ಇಲ್ಲದಿರುವ ಕಾರಣದಿಂದ ಮತ್ತೆ ಜಿಲ್ಲೆಯಲ್ಲಿ ಕಾಂಗ್ರೆಸ್ ಕಡೆ ಹೋಗುವ ಲಕ್ಷಣಗಳು ಕಂಡು ಬಂದಿವೆ. ಇತ್ತೀಚೆಗೆ ನಡೆದಿರುವ ಪುರಸಭಾ ಹಾಗೂ ನಗರ ಸಭಾ ಚುನಾವಣೆಗಳಲ್ಲಿ ಇದು ಕಂಡು ಬಂದಿದೆ. ಹಾಗೆಯೇ ಕಾಂಗ್ರೆಸ್ಸಿಗೆ ವಿರುದ್ಧವಾಗಿ ಮತ ಚಲಾಯಿಸಿರುವ ಹಿಂದುಳಿದ ವಿಭಾಗದ ಜನತೆಯೂ ಬೇರೆ ಬೇರೆ ಕಾರಣಗಳಿಂದ ಮತ್ತೆ ಕಾಂಗ್ರೆಸ್ ಕಡೆ ವಾಲುತ್ತಿರುವುದೂ ಕಂಡು ಬಂದಿದೆ. ತನ್ನ ಸರಕಾರ ಇರುವುದಾದರೂ ತನ್ನ ಸಂಘಟನೆಯನ್ನು ಕೆಳಮಟ್ಟದಿಂದಲೇ ಕಟ್ಟುವುದರಲ್ಲೂ, ತಾನು ಮಾಡಿರುವ ಕೆಲವು ಉತ್ತಮ ಕೆಲಸಗಳನ್ನು ಜನತೆಗೆ ತಿಳಿಸುವುದರಲ್ಲೂ ಮತ್ತು ಆರ್ಥಿಕ ಸಾಮಾಜಿಕವಾಗಿ ಅತ್ಯಂತ ಸುಲಿಗೆಗೆ ಒಳಗಾಗಿರುವ ವಿಭಾಗದ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಧೈರ್ಯದಿಂದ ನಿರ್ದಿಷ್ಟ ಕ್ರಮಗಳನ್ನು ತೆಗೆದು ಕೊಳ್ಳುವುದರಲ್ಲೂ ಜನತಾ ಪಕ್ಷ ಏನೇನೂ ಮಾಡದಿರುವುದರಿಂದ ಬಡಜನತೆ ಈ ಪಕ್ಷದ ಬಗ್ಗೆ ಒಲವನ್ನು ತೋರಿಸುವುದು ಕಂಡು ಬರುತ್ತಿಲ್ಲ.

ಈ ಪರಿಸ್ಥಿತಿಯಲ್ಲಿ ಜಿಲೆಯಲ್ಲಿ ಕಾರ್ಮಿಕವರ್ಗದ ಪಕ್ಷದೆಡೆಗೆ ಎಲ್ಲಾ ಶೋಷಿತ ಜನರನ್ನೂ, ಅಲ್ಪ ಸಂಖ್ಯಾತರನ್ನೂ, ಹಿಂದುಳಿದ ವರ್ಗಗಳವರನ್ನೂ ಬರುವಂತೆ ಮಾಡಲು ವಿಶೇಷ ಪ್ರಯತ್ನ ಅಗತ್ಯ. ರೈತರ ಮತ್ತು ಹಳ್ಳಿಯ ಬಡವರ ಬೇಡಿಕೆ ಮತ್ತು ಹೋರಾಟಗಳಿಗೆ ಬೆಂಬಲವೀಯುತ್ತಾ, ಜಿಲ್ಲೆಗಳಲ್ಲಿ ಅತೀ ದೊಡ್ಡ ಸಂಖ್ಯೆಯಲ್ಲಿರುವ ಕೃಷಿ ಕೂಲಿಗಾರರ ಸಂಘಟನೆ ಮತ್ತು ಹೋರಾಟ ಬೆಳೆಸಲು ಪ್ರೋತ್ಸಾಹ ನೀಡುತ್ತಾ, ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುತ್ತಾ, ಹಿಂದುಳಿದವರ ಮತ್ತು ದುರ್ಬಲ ವರ್ಗದವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುತ್ತಾ, ಮಧ್ಯಮ ವರ್ಗದವರನ್ನು ತನ್ನೆಡೆಗೆ ಆಕರ್ಷಿಸುತ್ತಾ, ಎಲ್ಲಾ ನೌಕರ ವರ್ಗ, ವಿದ್ಯಾರ್ಥಿ, ಯುವಜನತೆ ಮತ್ತು ಪ್ರಗತಿಶೀಲ ಬುದ್ಧಿಜೀವಿಗಳೊಂದಿಗೆ ಸೌಹಾರ್ದತೆಯನ್ನು ಕಲ್ಪಿಸುತ್ತಾ ಜಿಲ್ಲೆಯ ಕಾರ್ಮಿಕ ವರ್ಗವು ಮುನ್ನಡೆಯುವಂತಾದರೆ ಮೇಲೆ ಹೇಳಿರುವುದನ್ನು ಸಾಧಿಸುವುದು ಸಾಧ್ಯ. ಸಿಐಟಿಯು ಧೋರಣೆಗಳನ್ನು ಸರಿಯಾಗಿ ಕಾರ್ಯಗತಗೊಳಿಸುವುದರಿಂದ ಇದು ಸಾಧ್ಯ.

ಸಿಐಟಿಯು ಸ್ಥಾಪನೆಯಾದ ಮೇಲೆ ಜಿಲ್ಲೆಯಲ್ಲಿ ಮೊದಲ ಬಾರಿಗೆ ನಡೆಯಲಿರುವ ರಾಜ್ಯ ಸಮ್ಮೇಳನವು ಜಿಲ್ಲೆಯಲ್ಲಿ ಕಾರ್ಮಿಕ ವರ್ಗದ ಸಂದೇಶವನ್ನು ಸಾರಲೂ, ಕಾರ್ಮಿಕ ವರ್ಗದ ರಾಜಕೀಯವನ್ನು ನಿರ್ಣಾಯಕವಾಗಿ ಅಚ್ಚು ಒತ್ತಲೂ, ಜಿಲ್ಲೆಯಾದ್ಯಂತ ಕಾರ್ಮಿಕ ವರ್ಗವನ್ನು ಇನ್ನೂ ಪ್ರಬಲವಾಗಿ ಸಂಘಟಿಸಲೂ ಖಂಡಿತ ಸಹಾಯವಾಗಬಲ್ಲದು. ವ್ಯಾಪಕ ಪ್ರಚಾರದೊಂದಿಗೆ ಸಿಐಟಿಯು ವಿನ ನಾಲ್ಕನೇ ಸಮ್ಮೇಳನದ ವ್ಯವಸ್ಥೆಯನ್ನು ಸುಸಂಘಟಿತವಾಗಿ ಮಾಡಲು ವಿಶಾಲವಾಗಿ ರಚಿಸಿರುವ ಸಮ್ಮೇಳನದ ಸ್ವಾಗತ ಸಮಿತಿಯು ಯೋಜನೆ ಹಾಕಿದೆ. ಸಮ್ಮೇಳನದ ಕೊನೆಯ ದಿನ, ಅಂದರೆ ಮೇ 17 ರಂದು ರೈತರು, ಹಳ್ಳಿಯ ಬಡವರು, ವಿದ್ಯಾರ್ಥಿ ಯುವ ಜನತೆ ಮತ್ತು ಇನ್ನಿತರೆ ವಿಭಾಗದ ಜನತೆಯನ್ನು ಸೇರಿಸಿಕೊಂಡು ಸಂಘಟಿತ ಕಾರ್ಮಿಕ ವರ್ಗದ ಬೃಹತ್ ಮೆರವಣಿಗೆ ಮತ್ತು ಭಾರಿ ಬಹಿರಂಗ ಸಭೆಯನ್ನು ನಡೆಸಲು ಸ್ವಾಗತ ಸಮಿತಿಯು ನಿರ್ಧರಿಸಿದೆ. ಜಿಲ್ಲೆಯ ಮೂಲೆ ಮೂಲೆಗಳಿಂದ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರೂ, ರೈತರೂ ಬಂದು 17 ರಂದು ತಮ್ಮ ಸಂಘಟನಾ ಶಕ್ತಿಯ ಪ್ರದರ್ಶನ ನಡೆಸಲೂ, ಜಿಲ್ಲೆಯ ಮತ್ತು ರಾಜ್ಯದ ಶೋಷಿತ ಜನತೆಗೆ ಹಾಗೂ ಅಲ್ಪ ಸಂಖ್ಯಾತರಿಗೂ, ದುರ್ಬಲ ವರ್ಗದ ಜನತೆಗೂ ಧೈರ್ಯ, ಸ್ಫೂರ್ತಿಗಳನ್ನೀಯಲೂ ಉದ್ದೇಶಿಸಲಾಗಿದೆ. ರಾಜ್ಯದ ಬೇರೆಬೇರೆಡೆಗಳಿಂದಲೂ ಕಾರ್ಮಿಕರು ಮತ್ತು ರೈತರು 17 ರಂದಿನ ರ‍್ಯಾಲಿಯಲ್ಲಿ ಭಾಗವಹಿಸುವಂತೆ ಮಾಡಲು ಪ್ರಯತ್ನ ನಡೆಯುತ್ತಿರುವ ಬಗ್ಗೆ ವರದಿಗಳು ಬಂದಿವೆ. ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳು ಮತ್ತು ಕೊನೆಯ ದಿನ ರ‍್ಯಾಲಿಯಲ್ಲಿ ಭಾಗವಹಿಸುವವರು ತುಂಬು ಉತ್ಸಾಹ, ಹೊಸ ಸ್ಫೂರ್ತಿ ಮತ್ತು ಕಾರ್ಮಿಕ ವರ್ಗದ ಸಂಘಟನೆ ಮತ್ತು ರಾಜಕೀಯವನ್ನು ಅಗ್ರಸ್ಥಾನಕ್ಕೇರಿಸುವ ನಿರ್ಧಾರಗಳೊಂದಿಗೆ ಹಿಂದಿರುಗುವಂತಾಗಬೇಕೆಂದು ಸ್ವಾಗತ ಸಮಿತಿಯು ಬಯಸಿ, ಸಮ್ಮೇಳನಕ್ಕೆ ಸಿದ್ಧತೆ ನಡೆಸುತ್ತಿದೆ.

—ಎಂ. ಕೆ. ಭಟ್ಟ

ವಿರೋಧ ಪಕ್ಷಗಳ ದೆಹಲಿ ಸಮಾವೇಶದ ಕರೆ

ವಿಚ್ಛಿದ್ರಕಾರಿಗಳ ವಿರುದ್ಧ, ಜನವಿರೋಧೀ ನೀತಿಗಳ ವಿರುದ್ಧ ಹೋರಾಟ ಮುಂದುವರಿಯಬೇಕು

[ದೇಶದಲ್ಲಿ ಪ್ರಜಾಪ್ರಭುತ್ವ ಚಳವಳಿಯ ಮುನ್ನಡೆಯ ಇನ್ನೊಂದು ಹೆಜ್ಜೆಯಾಗಿ ಏಪ್ರಿಲ್ 17 ರಂದು ನವ ದೆಹಲಿಯಲ್ಲಿ ನಡೆದ ವಿರೋಧ ಪಕ್ಷಗಳ ಅಖಿಲ ಭಾರತ ಸಮಾವೇಶದ ವರದಿ "ಐಕ್ಯರಂಗ" ದ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಆ ಸಮಾವೇಶ ಒಂದು ಘೋಷಣಾ ಪತ್ರವನ್ನು ಅಂಗೀಕರಿಸಿತು. ಸಿ. ಪಿ. ಐ. (ಎಂ) ನ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾಡ್‌ರವರು ಅದನ್ನು ಮಂಡಿಸಿದ್ದರು. ಆರಂಭದಲ್ಲಿ ಫೆಬ್ರುವರಿ 13 ರಂದು ದೇಶಾದ್ಯಂತ ಬೇಡಿಕೆ ದಿನಾಚರಣೆ ನಡೆಸಿ, ರಾಜ್ಯ ಸಮಾವೇಶಗಳನ್ನು ಯಶಸ್ವಿಯಾಗಿ ಪೂರೈಸಿದ ವಿರೋಧ ಪಕ್ಷಗಳ ಸಕ್ರಿಯ ಕಾರ್ಯಕರ್ತರಿಗೆ ಧನ್ಯವಾದಗಳನ್ನರ್ಪಿಸಿದ ಘೋಷಣಾ ಪತ್ರ, ಈ ಅಖಿಲ ಭಾರತ ಬೇಡಿಕೆಗಳನ್ನು, ಜತೆಗೆ ರಾಜ್ಯದ ಬೇಡಿಕೆಗಳನ್ನು ಆಧಾರವಾಗಿಟ್ಟುಕೊಂಡು ಒಂದು ಐಕ್ಯ ಹಾಗೂ ಸತತ ಪ್ರಚಾರಕಾರ್ಯ ನಡೆಸಿ ವಿಶಾಲ ಜನಸ್ತೋಮದ ನಡುವೆ ಅದನ್ನು ತೆಗೆದುಕೊಂಡು ಹೋಗಬೇಕೆಂದು ವಿರೋಧ ಪಕ್ಷಗಳ ಎಲ್ಲಾ ಕಾರ್ಯಕರ್ತರಿಗೆ ಕರೆ ನೀಡಿದೆ. ಬೆಂಗಳೂರಿನಲ್ಲಿ ನಡೆದ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಸಮಾವೇಶದಿಂದ ಆರಂಭಿಸಿ, ವಿಜಯವಾಡ, ದೆಹಲಿ, ಶ್ರೀನಗರ ಹಾಗೂ ಕಲ್ಕತ್ತೆಯಲ್ಲಿ ನಡೆದ ಸಮ್ಮೇಳನಗಳ ಮೂಲಕ ವಿರೋಧ ಪಕ್ಷಗಳು ಒಂದು ಒಮ್ಮತಕ್ಕೆ ಬಂದು ಈ ಬೇಡಿಕೆಗಳ ಕಾರ್ಯಕ್ರಮ ಹಾಗೂ ಆಂದೋಲನ ಹೇಗೆ ರೂಪುಗೊಂಡಿತು. ಎಂಬುದನ್ನು ಜ್ಞಾಪಿಸಿಕೊಟ್ಟ ಘೋಷಣಾಪತ್ರದ ಸಾರಾಂಶವನ್ನು ಮುಂದೆ ಕೊಡಲಾಗಿದೆ.]

ಜನವರಿಯಲ್ಲಿ ಕಲಕತ್ತೆಯಲ್ಲಿ ನಡೆದ ಸಮ್ಮೇಳನಕ್ಕಿಂತ ಮೊದಲು ನಡೆದ ಮೂರು ಸಮ್ಮೇಳನಗಳ ತೀರ್ಮಾನಗಳು ದೇಶವನ್ನು ಸುಡುತ್ತಿರುವ ಕೆಲವು ಪ್ರಮುಖ ಪ್ರಶ್ನೆಗಳ ಬಗ್ಗೆ ರಾಷ್ಟ್ರೀಯ ಒಮ್ಮತಾಭಿಪ್ರಾಯವನ್ನು ಮೂಡಿಸುವ ಪ್ರಾಮಾಣಿಕ ಪ್ರಯತ್ನಗಳಾಗಿದ್ದವು. ಇದಕ್ಕೆ ಕಲ್ಕತ್ತೆಯಲ್ಲಿ 11 ಅಂಶಗಳ ಆರ್ಥಿಕ ಬೇಡಿಕೆಗಳನ್ನೂ ಸೇರಿಸಲಾಯಿತು. ಕೇಂದ್ರದ ಆಳುವ ಪಕ್ಷ ವಿರೋಧ ಪಕ್ಷಗಳ ಸರ್ಕಾರಗಳನ್ನು ಅಸ್ಥಿರಗೊಳಿಸುವ ಪ್ರಯತ್ನಗಳನ್ನು ಎದುರಿಸಲು ಸಮ್ಮೇಳನ ಕರೆ ನೀಡಿತು. ಸಂಕ್ಷೇಪವಾಗಿ, ವಿರೋಧ ಪಕ್ಷಗಳ ನಾಲ್ಕು ಸಮ್ಮೇಳನಗಳ ಒಮ್ಮತಾಭಿಪ್ರಾಯ, ರಾಜಕೀಯ ದತ್ತ ಸಾಮೂಹಿಕ ಆಂದೋಲನವೊಂದನ್ನು ರೂಪಿಸುವಲ್ಲಿ ಯಶಸ್ವಿಯಾಯಿತು.

ಈ ಒಮ್ಮತಾಭಿಪ್ರಾಯ ಚುನಾವಣೆಗಳು ನಡೆದರೂ ಅಥವಾ ನಡೆಯದಿದ್ದರೂ ಅಪ್ರಸ್ತುತವೇನೂ ಆಗುವುದಿಲ್ಲ. ಯಾಕೆಂದರೆ ಚುನಾವಣೆಯಲ್ಲಿ ಯಾರು ಗೆದ್ದರೂ ಈ ಪ್ರಶ್ನೆಗಳು ಜನತೆಯ ಸಮ್ಮುಖ ಇದ್ದೇ ಇರುತ್ತದೆ. ಆದ್ದರಿಂದ ಫೆಬ್ರುವರಿ 13 ರಂದು ಆರಂಭವಾದ ಸಾಮೂಹಿಕ ಆಂದೋಲನ ಮುಂದುವರಿಯಬೇಕು.

ಆರ್ಥಿಕ ಬಿಕ್ಕಟ್ಟಿನಲ್ಲಿ ಉಲ್ಬಣ

ಕಲ್ಕತ್ತೆ ಸಮ್ಮೇಳನ ಯಾವ ಆರ್ಥಿಕ ಪರಿಸ್ಥಿತಿಯ ಬಗ್ಗೆ ಜನರ ಗಮನ ಸೆಳೆದಿತ್ತೋ, ಅದು ಇನ್ನಷ್ಟು ಗಂಭೀರಗೊಂಡಿದೆ. ಸಂಸತ್ತಿನಲ್ಲಿ ಈ ವರ್ಷದ ಫೆಬ್ರುವರಿಯಲ್ಲಿ ಮಂಡಿಸಿದ ಆರ್ಥಿಕ ಸರ್ವೇಕ್ಷಣೆ ಮತ್ತು ಬಜೆಟ್‌ಗಳಿಂದ ಆರ್ಥಿಕ ವ್ಯವಸ್ಥೆಯ ಹೆಚ್ಚುತ್ತಿರುವ ಬಿಕ್ಕಟ್ಟಿನ ಗತಿಯೊಂದು ಅಂತವೂ ಇದನ್ನೇ ಸೂಚಿಸುತ್ತಿರುವುದು ಕಂಡುಬರುತ್ತದೆ. ರೂಪಾಯಿಯ ಕೊಳ್ಳುವ ಸಾಮರ್ಥ್ಯ 1960ಕ್ಕೆ ಹೋಲಿಸಿದರೆ 12-83 ಪೈಸೆಗಿಳಿದಿದೆ. ಸರಕಾರದ ಆಮದು ರಫ್ತು ಧೋರಣೆಗಳಿಂದಾಗಿ ದೇಶ ಬೆಳವಣಿಗೆಯಲ್ಲಿ ಪರಾವಲಂಬಿಯಾಗುತ್ತದೆ. ಸಂಪತ್ತಿನ ಮೂಲ ಉತ್ಪಾದಕರಾದ ಕಾರ್ಮಿಕರು ರೈತರು ಬಡವರಾಗುತ್ತಿದ್ದಾರೆ. ಅತ್ತ ಗುತ್ತೇದಾರಿ ಮನೆತನಗಳ ಬಹುರಾಷ್ಟ್ರೀಯ ಸಂಸ್ಥೆಗಳ ಆಸ್ತಿಮೌಲ್ಯ ಭಾರೀ ಪ್ರಮಾಣದಲ್ಲಿ ಏರುತ್ತಿದೆ. ವಿದೇಶೀ ಕಂಪನಿಗಳೊಂದಿಗೆ ಒಪ್ಪಂದಗಳ ಮೂಲಕ ಸಾರ್ವಜನಿಕ ವಲಯದ ಪಾತ್ರವನ್ನು ಕಡಿಮೆ ಮಾಡುವ ಕೈಗಾರಿಕಾ ಧೋರಣೆಯ ಮೂಲಕ ದೇಶದ ಸ್ವಾವಲಂಬನೆಯಲ್ಲಿ ಪತನ ಕಾಣಬರುತ್ತಿದೆ. ಬಹಳಷ್ಟು ಕೈಗಾರಿಕಾ ಸಂಸ್ಥೆಗಳು ರೋಗಗ್ರಸ್ತವಾಗುತ್ತಿದ್ದು ಬ್ಯಾಂಕಿಂಗ್ ವ್ಯವಸ್ಥೆಯ ದೊಡ್ಡ ಮೊತ್ತ ಅಲ್ಲಿ ಸಿಲುಕಿಸಿಕೊಂಡಿರುತ್ತವೆ. ಈ ಸ್ಥಿತಿಯ ದುರ್ಲಾಭ ಪಡೆದು ಗುತ್ತೇದಾರಿ ಮನೆತನಗಳು ಇಂತಹ ಘಟಕಗಳನ್ನು ವಹಿಸಿಕೊಂಡು ನುಂಗಿಬಿಡುತ್ತವೆ, ಮಾತ್ರವಲ್ಲ ಇದರ ಮೂಲಕ ಅಗಾಧ ಕರವಿನಾಯಿತಿ ಕೂಡಾ ಪಡೆಯುತ್ತಿವೆ. ಈ ರೀತಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಬಿಕ್ಕಟ್ಟು ಉಂಟಾಗಿ ಆರ್ಥಿಕ ಅರಾಜಕತೆ ಹರಡುವ ಪರಿಸ್ಥಿತಿಯನ್ನು ಕಾಂಗ್ರೆಸ್ (ಐ) ಸರಕಾರ ಉಂಟುಮಾಡುತ್ತಿದೆ.

ಆದರೂ ನಗರ ಗ್ರಾಮಾಂತರಗಳಲ್ಲಿ ದುಡಿಯುವ ಜನತೆ ಈ ಧೋರಣೆಗಳನ್ನು ವಿರೋಧಿಸುತ್ತಿದ್ದಾರೆ ಎಂಬುದು ಸಮಾಧಾನ ಸಂಗತಿ. ಸೆಣಬು, ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರು ಮತ್ತು ಹೋರಾಟ ನಿರತ ಇತರ ಕಾರ್ಮಿಕರ ಧೀರ ಹೋರಾಟಕ್ಕಾಗಿ ಸಮಾವೇಶ ಅವರನ್ನು ಅಭಿನಂದಿಸುತ್ತದೆ. "ಪಾರ್ಲಿಮೆಂಟ್ ಚಲೋ" ಸಂಘಟಿಸುತ್ತಿರುವ ಎನ್. ಸಿ. ಸಿ. ಯನ್ನು ಸಮಾವೇಶ ಅಭಿನಂದಿಸುತ್ತದೆ.

ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ

ಕಳೆದ ವರ್ಷದ ಮೇ ತಿಂಗಳಲ್ಲಿ ವಿಜಯವಾಡದಲ್ಲಿ ನಡೆದ ವಿರೋಧ ಪಕ್ಷಗಳ ಸಮ್ಮೇಳನ ಹಾಗೂ ನಂತರದ ಸಮ್ಮೇಳನಗಳು ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಸಾಮೂಹಿಕ ಎಚ್ಚರಿಕೆ ನೀಡಿದ್ದವು. ಸ್ಥಿತಿ ಈಗ ಇನ್ನೂ ಉಲ್ಬಣಗೊಂಡಿದೆ. ಪಂಜಾಬ್ ಪರಿಸ್ಥಿತಿಯ ಬಗ್ಗೆ ಅಕಾಲಿದಳವೂ ಸೇರಿದಂತೆ ವಿರೋಧ ಪಕ್ಷಗಳು ಒಂದು ಐಕ್ಯ ನಿಲುವು ತಳೆದವು. ಆದರೆ ಈಗ ಅಕಾಲಿದಳ ತಳೆದಿರುವ ದುರದೃಷ್ಟಕಾರಿ ನಿಲುವಿನಿಂದಾಗಿ ಆಳುವ ಪಕ್ಷದ ಕುತಂತ್ರಗಳಿಗೆ ನೆರವು ದೊರೆಯುತ್ತಿದೆ. ಅತ್ತ ಇದು ಭಿಂದ್ರನ್‌ವಾಲೆ ನೇತೃತ್ವದ ತೀವ್ರಗಾಮಿಗಳನ್ನೂ ಬಲಪಡಿಸುತ್ತಿದೆ.

ಭಿಂದ್ರನ್‌ವಾಲೆ ನೇತೃತ್ವದ ತೀವ್ರಗಾಮಿಗಳಿಂದ ತಮ್ಮನ್ನು ಏಕದಂ ಬೇರ್ಪಡಿಸಿಕೊಂಡು ಪಂಜಾಬೀ ಜನತೆಯ ನ್ಯಾಯಪೂರ್ಣವಾದ ರಾಜಕೀಯ, ಆರ್ಥಿಕ ಹಾಗೂ ಪ್ರಾದೇಶಿಕ ಬೇಡಿಕೆಗಳ ಮೇಲೆ ಹೆಚ್ಚು ಗಮನ ನೀಡಿ ದೇಶದಲ್ಲಿ ಪ್ರಜಾಪ್ರಭುತ್ವ ಚಳುವಳಿಯನ್ನು ಬಲಪಡಿಸಬೇಕೆಂದು ಸಮಾವೇಶ ಅಕಾಲಿದಳದ ನಾಯಕತ್ವಕ್ಕೆ ಮನವಿ ಮಾಡಿಕೊಂಡಿದೆ.

ಪಂಜಾಬಿನಲ್ಲಿ ಮಾತ್ರವಲ್ಲ ಇತರೆಡೆಗಳಲ್ಲೂ ಸಂಕುಚಿತವಾದಿ, ವಿಚ್ಛಿದ್ರಕಾರಿ, ಕೋಮುವಾದಿ ಶಕ್ತಿಗಳು ತಲೆಯೆತ್ತುತ್ತಿವೆ. ಜಾತ್ಯಾತೀತ-ಪ್ರಜಾಪ್ರಭುತ್ವವಾದೀ ಶಕ್ತಿಗಳು ಈ ಪುನರುತ್ಥಾನವಾದಿ, ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಡಬೇಕಾಗಿದೆ. ದೇಶಾದ್ಯಂತ ದುಡಿಯುವ ಜನತೆ ವಿರೋಧ ಪಕ್ಷಗಳ 11 ಅಂಶಗಳ ಬೇಡಿಕೆಗಳ ಆಂದೋಲನದಲ್ಲಿ ಭಾಗವಹಿಸಿ ಜಾತ್ಯಾತೀತ ಶಕ್ತಿಗಳೊಂದಿಗೆ ಈ ವಿಚ್ಛಿದ್ರಕಾರೀ ಪ್ರವೃತ್ತಿಗಳನ್ನು ವಿರೋಧಿಸುವಲ್ಲಿ ಸಹಕರಿಸುತ್ತಿದ್ದಾರೆ ಎಂಬುದು ಸಮಾಧಾನದ ಸಂಗತಿ.

ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ಬಗ್ಗೆ ಸದಾ ಬೊಬ್ಬೆ ಹಾಕುವ ಆಳುವ ಕಾಂಗ್ರೆಸ್ [ಐ] ನಾಯಕರು ಮಾತ್ರ ಈ ಪ್ರತ್ಯೇಕತಾವಾದಿ, ವಿಚ್ಛಿದ್ರಕಾರೀ ಶಕ್ತಿಗಳನ್ನು ತಮ್ಮ ಸಂಕುಚಿತ ಹಿತಾಸಕ್ತಿಗಳಿಗಾಗಿ ನೀತಿಗೆಟ್ಟ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ತ್ರಿಪುರಾ ಉಪಜಾತಿ ಯುವ ಸಮಿತಿಯಂತಹ ವಿಚ್ಛಿದ್ರಕಾರೀ ಸಂಘಟನೆಗಳೊಂದಿಗೆ ಅವರು ಸಹಕರಿಸುತ್ತಿದ್ದಾರೆ.

ಆದ್ದರಿಂದ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಾಗಿ ಕೋಮು ಸೌಹಾರ್ದ ಮತ್ತು ಜಾತ್ಯತೀತತೆಯ ರಕ್ಷಣೆಗಾಗಿ, ಸರ್ವಾಧಿಕಾರೀ ಪ್ರವೃತ್ತಿಯ ಪ್ರಯತ್ನಗಳ ವಿರುದ್ಧ ಹಾಗೂ ಜನ ಸಾಮಾನ್ಯರ ಜೀವನಮಟ್ಟದ ಮೇಲೆ ನಡೆಯುತ್ತಿರುವ ಹಲ್ಲೆಗಳನ್ನು ಎದುರಿಸಲು ದುಡಿಯಬೇಕೆಂದು ಇಲ್ಲಿ ಪ್ರತಿನಿಧಿಸಲ್ಪಟ್ಟಿರುವ ಎಲ್ಲಾ ಪಕ್ಷಗಳ ಕಾರ್ಯಕರ್ತರು, ಸದಸ್ಯರು ಹಾಗೂ ಬೆಂಬಲಿಗರಿಗೆ ಸಮಾವೇಶ ಮನವಿ ಮಾಡುತ್ತದೆ.

ಇತರ ನಿರ್ಣಯಗಳು

ಈ ಮುಖ್ಯ ಘೋಷಣಾ ಪತ್ರವಲ್ಲದೆ ಶ್ರೀಲಂಕಾದ ಬಗ್ಗೆ ಹಾಗೂ ಆಂಧ್ರ ಪ್ರದೇಶದ ವಿಧಾನ ಪರಿಷತ್ತಿನ ರದ್ಧತಿ ಬಗ್ಗೆ ಸಮಾವೇಶ ನಿರ್ಣಯಗಳನ್ನು ಅಂಗೀಕರಿಸಿತು. ಶ್ರೀಲಂಕಾದ ಸಂಕುಚಿತವಾದಿಗಳಿಂದ ತೀವ್ರ ಹಲ್ಲೆ ಹಾಗೂ ಅಮಾನವೀಯ ದಮನಕ್ಕೊಳಗಾಗಿರುವ ತಮಿಳು ಅಲ್ಪ ಸಂಖ್ಯಾತರಿಗೆ ಸೌಹಾರ್ದ ಭಾವ ವ್ಯಕ್ತಪಡಿಸಿದ ನಿರ್ಣಯದಲ್ಲಿ ಅವರ ಮಾನವೀಯ ಹಕ್ಕುಗಳ ದಮನದ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಲಾಗಿದೆ. ದೇಶದ ಪ್ರಜಾಪ್ರಭುತ್ವವಾದಿ ವಿರೋಧ ಪಕ್ಷಗಳು ಬಹುಭಾಷೀಯ ದೇಶವಾದ ಶ್ರೀಲಂಕಾದ ಐಕ್ಯತೆಯ ಪರವಾಗಿವೆ ಎಂದು ನಿರ್ಣಯ ಘೋಷಿಸಿದೆ. ಶ್ರೀಲಂಕಾ ಸರಕಾರ ತಮಿಳು ಅಲ್ಪ ಸಂಖ್ಯಾತರ ನ್ಯಾಯಪೂರ್ಣ ಬೇಡಿಕೆಗಳನ್ನು ಒಪ್ಪಿಕೊಂಡು ಶ್ರೀಲಂಕಾದಲ್ಲಿ ಶಾಂತಿ, ಸೌಹಾರ್ದ ನೆಲೆಗೊಳಿಸಬೇಕೆಂದು ಶ್ರೀಲಂಕಾ ಸರಕಾರಕ್ಕೆ ಮನವಿ ಮಾಡಿಕೊಂಡ ಈ ನಿರ್ಣಯ ಭಾರತ ಸರಕಾರ ಇದರಲ್ಲಿ ತನ್ನ ಪ್ರಭಾವ ಬಳಸಬೇಕೆಂದು ಸಮಾವೇಶದ ಪರವಾಗಿ ಒತ್ತಾಯಿಸಿದೆ.

ಇನ್ನೊಂದು ನಿರ್ಣಯವನ್ನು ಅಂಗೀಕರಿಸಿ ಆಂಧ್ರ ವಿಧಾನ ಪರಿಷತ್ತನ್ನು ರದ್ದುಗೊಳಿಸಬೇಕೆಂದು ಆಂಧ್ರ ವಿಧಾನ ಸಭೆ ವ್ಯಕ್ತಪಡಿಸಿದ ಸಾರ್ವಭೌಮ ಅಭಿಪ್ರಾಯವನ್ನು ಸಮಾವೇಶ ಬೆಂಬಲಿಸಿ ಇದಕ್ಕೆ ಸಂಬಂಧಪಟ್ಟಂತೆ ತಕ್ಕ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರಕಾರಕ್ಕೆ ಕರೆ ನೀಡಿದೆ.

*

ವರದಕ್ಷಿಣೆ ಪೀಡೆಗೆ ತುತ್ತಾದ ಚಂದ್ರಾವತಿ

ವರದಕ್ಷಿಣೆಯ ಪೀಡೆ ಕ್ಯಾನ್ಸರಿನಂತೆ ದೇಶವನ್ನಾವರಿಸುತ್ತಿದೆ. ಸಾವಿರಾರು ಯುವತಿಯರನ್ನು ಬಲಿತೆಗೆದುಕೊಳ್ಳುತ್ತಿದೆ. ಕೇಂದ್ರ - ರಾಜ್ಯ ಸರ್ಕಾರವಾಗಲಿ, ಸಾಮೂಹಿಕ ಸಂಘಟನೆಗಳಾಗಲೀ ಈ ರೀತಿ ವರದಕ್ಷಿಣೆಗೆ ಬಲಿಯಾಗುತ್ತಿರುವ ಹಸುಳೆಯರ ರಕ್ಷಣೆಗೆ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಸಾಕಷ್ಟು ಸಾಕ್ಷಿ ಪುರಾವೆಗಳಿಲ್ಲೆಂಬ ಕಾರಣದಿಂದ ತರುಣಿಯರ ಹತ್ಯೆಗೆ ಕಾರಣರಾದ ಪತಿಗಾಗಲಿ, ಅತ್ತೆ ಮಾವಂದಿರಿಗಾಗಲಿ ಕಠಿಣ ಶಿಕ್ಷೆ ವಿಧಿಸುವುದರಲ್ಲಿಯೂ ಕೋರ್ಟುಗಳೇ ಹಿಂದೇಟು ಹಾಕುತ್ತವೆ. ದಿಲ್ಲಿ ಕೋರ್ಟ್ ಕೊಲೆಗಡುಕರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿದ್ದರ ವಿರುದ್ಧ ಏಪ್ರಿಲ್ 18 ರಂದು ಸಿಂಧನೂರಿನಲ್ಲಿ ಬಾಯಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಮೌನ ಮೆರವಣಿಗೆ ನಡೆಸಲಾಯಿತು. ಇದರಲ್ಲಿ ಸಿಂಧನೂರು ತಾಲೂಕು ಕೋರಾಲ ತಾವುಕರೂರು, ವಿದ್ಯಾರ್ಥಿ ಫೆಡರೇಶನಿನ ಮುಖಂಡರಿಲ್ಲ ಭಾಗವಹಿಸಿದ್ದರು. ಮಹಿಳಾ ಸಂಘ ಪ್ರತಿಭಟನೆ ಮಾಡುವ, ಅಂಥ ಪ್ರತಿಭಟನೆಗಾಗಿ ಮಹಿಳಾ ಸಂಘದವರೇ ಕೋರ್ಟಿಗೆ ಅಪಮಾನ ಮಾಡಿದರೆಂಬ ಕಾರಣದಿಂದ ಛೀಮಾರಿ ಹಾಕಿಸಿಕೊಳ್ಳುವಂಥ ಚಿಂತಾಜನಕ ಪರಿಸ್ಥಿತಿಯ ಸುದ್ದಿ ಓದಿದಾಗ ನಮ್ಮ ನ್ಯಾಯಾಂಗ ಎತ್ತ ಸಾಗುತ್ತಿದೆಂಬುದನ್ನು ತೋರಿಸಿಕೊಡುತ್ತದೆ.

ಇತ್ತೀಚೆಗೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಜಾಲಿಹಾಳ ಕ್ಯಾಂಪಿನಲ್ಲಿ ವರದಕ್ಷಿಣೆ ತಂದುಕೊಡಲಿಲ್ಲೆಂಬ ಕಾರಣದಿಂದ ಚಂದ್ರಾವತಿ ಎಂಬ ತರುಣಿಯನ್ನು ಆಕೆಯ ಪತಿಯೇ ಕೊಲೆ ಮಾಡಿದ ಹೃದಯವಿದ್ರಾವಕ ಘಟನೆ ನಡೆಯಿತು. ಆಕೆಯ ಗಂಡ ಕೊಲೆಗಾರ ಕೃಷ್ಣಮೂರ್ತಿಯನ್ನಾಗಲೀ ಅವನಿಗೆ ಸಹಾಯ ಮಾಡಿದವರನ್ನಾಗಲಿ ಪೋಲೀಸರು ಇನ್ನೂ ಬಂಧಿಸಿಲ್ಲ.

(7ನೇ ಪುಟ ನೋಡಿ)

ಬೆಂಗಳೂರು

ಮುಖ್ಯಮಂತ್ರಿಗಳ ಗೃಹ ಕಛೇರಿ ಮುಂದೆ ಧರಣಿ

ವಿವಿಧ ಕಾರ್ಖಾನೆಗಳ ಸುಮಾರು 500 ಕ್ಕೂ ಹೆಚ್ಚು ಕಾರ್ಮಿಕರು ಏ. 18 ರಂದು ಮಧ್ಯಾಹ್ನ 11 ಗಂಟೆಗೆ ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆಯ ಮೂಲಕ ಮುಖ್ಯಮಂತ್ರಿಯವರ ಗೃಹ ಕಚೇರಿಗೆ ತೆರಳಿ ಧರಣಿ ನಡೆಸಿದರು. ರಾಷ್ಟ್ರೀಯ ಆಂದೋಲನ ಸಮಿತಿಯ ಕರ್ನಾಟಕ ಘಟಕದ ವತಿಯಿಂದ ಈ ಕಾರ್ಯಕ್ರಮ ನಡೆಯಿತು. ಧರಣಿಯಲ್ಲಿ ಭಾಗವಹಿಸಿದ ಕಾರ್ಮಿಕರನ್ನು ಉದ್ದೇಶಿಸಿ ಸಿಐಟಿಯುನ ಕಾ. ಟಿ. ಎಸ್. ಅನಂತರಾವ್, ಕಾ. ಆರ್. ಶ್ರೀನಿವಾಸ್ ಮಾತನಾಡಿದರು. ಎಐಟಿಯುಸಿ ಪರವಾಗಿ ಕಾ. ಅನಂತಸುಬ್ಬರಾವ್ ಮತ್ತು ಕಾ. ಮಹದೇವನ್, ಬಿ. ಎಂ. ಎಸ್. ನಿಂದ ಎಸ್. ಬಿ. ಶೇಷಾದ್ರಿ ಮತ್ತು ಸಿ. ಎ. ಎಸ್. ಶಾಸ್ತ್ರಿ ಅವರುಗಳು ಮಾತನಾಡಿದರು.

ಕೈಗಾರಿಕೆ ಮುಚ್ಚುವಿಕೆ, ಲಾಕ್‌ಔಟ್, ಕೈಗಾರಿಕಾ ಅಸ್ವಸ್ಥತೆ, ರಿಟ್ರೆಂಚ್‌ಮೆಂಟ್, ಲೇ-ಆಫ್ ಮುಂತಾದವುಗಳನ್ನು ವಿರೋಧಿಸುವ ಅಲ್ಲದೆ ರಾಜ್ಯದ ಮಫತ್‌ಲಾಲ್ ಪ್ಲೈವುಡ್ ಫ್ಯಾಕ್ಟರಿ, ಇಂಟರ್‌ನ್ಯಾಶನಲ್ ಇನ್‌ಸ್ಟ್ರುಮೆಂಟ್ಸ್ ಮೈಸೂರು ಸೋಗ್ಸ್ ಮತ್ತು ಡಿಟರ್ಜೆಂಟ್ಸ್, ಫಾಲ್ಕನ್ ಟೈರ್ಸ್, ಫೆದರ್‌ಲೈಟ್, ಅಸೋಸಿಯೇಟೆಡ್ ಡ್ರಗ್ ಕಂ. ನಿರಾಯು, ನಾಯರ್ ಅಂಡ್ ಫೋರ್ಜ್, ವೈಕಾಸ್ ಮುಂತಾದ ಕಂಪೆನಿಗಳು ಅಕ್ರಮವಾಗಿ ಮುಚ್ಚಿರುವುದನ್ನು ತೆರೆಯಲು ಒತ್ತಾಯಿಸುವ ಮನವಿಯೊಂದನ್ನು ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಬೊಮ್ಮಾಯಿ ಅವರಿಗೆ ಅರ್ಪಿಸಲಾಯಿತು.

(1ನೇ ಪುಟದಿಂದ)

ಈ ಎಲ್ಲ ಹೋರಾಟಗಳಲ್ಲೂ ಶತ್ರು ಒಬ್ಬನೇ ಆಗಿದ್ದಾನೆ. ಅದೇ ಸಾಮ್ರಾಜ್ಯಶಾಹಿ. ಅದು ನೇರವಾಗಿ ಅಥವಾ ಪರೋಕ್ಷವಾಗಿ ಜನರ ಪ್ರಗತಿಗೆ ನಿರಂತರ ಅಡ್ಡಿ ಒಡ್ಡುತ್ತಿದೆ.

ಸಮಾಜವಾದಿ ಜಗತ್ತು ಮತ್ತು ಅಲಿಪ್ತ ರಾಷ್ಟ್ರಗಳ ವಿರುದ್ಧ ಸಂ. ರಾ. ಅಮೆರಿಕಾ ಆಡಳಿತ ವ್ಯಾಪಕವಾಗಿ ವಿಧ್ವಂಸಕ ಚಟುವಟಿಕೆಗಳನ್ನು ನಡೆಸುತ್ತಲೇ ಇದೆ.

ಮೇ ದಿನದ ಅಗತ್ಯವು ಸಾಮ್ರಾಜ್ಯಶಾಹಿ, ಕುಲವಾದ ಮತ್ತು ನವವಸಾಹತುವಾದಗಳ ವಿರುದ್ಧದ ಹೋರಾಟವೊಂದೇ ಆಗಿರದೆ ಶಾಂತಿ, ಪ್ರಜಾಸತ್ತೆ ಮತ್ತು ಸಮಾಜವಾದದ ಸ್ಥಾಪನೆಗಾಗಿ ಅವಿರತ ಸಮರ ಹೂಡುವುದೂ ಅದರಲ್ಲಿ ಸೇರಿದೆ. ಇವು ನಿಕಟ ಅಂತರ್ ಸಂಬಂಧ ಹೊಂದಿದ್ದು ಪರಸ್ಪರ ಪೂರಕವಾಗಿವೆ.

ಹೀಗೆ ಜನತೆಯ ಮೇ ದಿನದ ಹೋರಾಟವು ನಿರಂತರವಾಗಿ ಮುನ್ನಡೆದಿದೆ. ಜಗತ್ತಿನ ಎಲ್ಲ ರಾಷ್ಟ್ರಗಳ ಜನತೆ ತಮ್ಮನ್ನು ಆವರಿಸಿರುವ ಎಲ್ಲ ಕೇಡುಕುಗಳಿಂದ ವಿಮೋಚಿತರಾಗಿ ಸಮಾಜವಾದಿ ರಾಷ್ಟ್ರಗಳ ಜನತೆಯಂತೆಯೇ ಪೂರ್ಣ ಸ್ವತಂತ್ರರಾಗಿ ಈ ದಿನವನ್ನು ನೈಜ ಸುಖ, ಶಾಂತಿಯ ದಿನವಾಗಿ ಆಚರಿಸುವ ತನಕವೂ ಈ ಹೋರಾಟ ಸಾಗುವುದು.

ಎ. ಎಸ್. ಮೂರ್ತಿ

ಕೃಪೆ : ಸೋವಿಯತ್ ನಿಯತಕಾಲಿಕ

"ವರದಕ್ಷಿಣೆ" ಬಗ್ಗೆ ವಿಚಾರ ಸಂಕಿರಣ

ದಿನಾಂಕ 15-4-84 ರಂದು ಡಿ. ವೈ. ಎಫ್. ಐ. ನ ಧಾರವಾಡ ಜಿಲ್ಲಾ ಸಮಿತಿ ಆಶ್ರಯದಲ್ಲಿ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ನಗರದ ಸರ್ಕಾರಿ ನೌಕರರ ಭವನದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ವಾಮಿ ನಿತ್ಯಾನಂದ ಜೀಯವರು ವಹಿಸಿದ್ದರು.

ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಶ್ರೀಮತಿ ಸುಕನ್ಯ ಮಾರುತಿ, ಪ್ರಫುಲ್ ನಾಯಕ್ ಮತ್ತು ಶ್ರೀಮತಿ ಮೀರಾಹಳಕಟ್ಟಿ ಅವರುಗಳು ಕ್ರಮವಾಗಿ "ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು," ವರದಕ್ಷಿಣೆ ಹಾಗು ಕಾನೂನು ಇತಿ ಮಿತಿ" ಮತ್ತು "ವರದಕ್ಷಿಣೆ ಹಾಗು ಹೋರಾಟ" ವಿಷಯಗಳ ಬಗ್ಗೆ ಮಾತನಾಡಿದರು.

ಕಾಂ. ನಿತ್ಯಾನಂದಜೀಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ವರದಕ್ಷಿಣೆ ಒಂದು ಸಾಮಾಜಿಕ ಪಿಡಗು ನಿಜ, ಆದರೆ ಇಂದಿನ ಸಮಾಜ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯಾದರೆ ಮಾತ್ರ ವರದಕ್ಷಿಣೆಪದ್ಧತಿನಿವಾರಣೆಸಾಧ್ಯ ಎಂದು ತಿಳಿಸಿದರು. ಸ್ವಾಗತ ಹಾಗೂ ವಂದನಾರ್ಪಣೆಯನ್ನು ಡಿವೈಎಫ್‌ಐನ ರಾಜ್ಯಸಮಿತಿಸದಸ್ಯ ಕಾಂ. ಜಿ. ಎಲ್. ದೇಶಪಾಂಡೆ ಮಾಡಿದರು ಇದೇ ಸಮಯದಲ್ಲಿ "ವರದಕ್ಷಿಣೆ ಹಾಗು ಹೆಣ್ಣಿನ ಶೋಷಣೆ" ವಿಷಯವಾಗಿ "ಚಿತ್ರ ಪ್ರದರ್ಶನ"ವನ್ನು ಏರ್ಪಡಿಸಲಾಗಿತ್ತು.

ತಾ. 9·4·84ರಂದೂ ಸಹ ವಿವೇಕಾನಂದ ವೃತ್ತದಲ್ಲಿ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಪ್ರದರ್ಶನದ ಉದ್ಘಾಟನೆಯನು ಸಿ. ಐ. ಟಿ. ಯು. ಕಾರ್ಯಕರ್ತರಾದ ಎಂ. ಬಿ. ಕಟ್ಟಿಯವರು ನೆರವೇರಿಸಿದರು.

ವಾರ್ಷಿಕ ಸಭೆ

ಬಿಜಾಪುರ ಮುನಸಿಪಲ್ ಕಾಮಗಾರ ಯೂನಿಯನ್ನಿನ ವಾರ್ಷಿಕ ಸಭೆ ಸೇರಿ ಎಚ್. ಕೆ. ಉಪಾಧ್ಯಾಯರನ್ನು ಅಧ್ಯಕ್ಷ, ಮಲ್ಲಪ್ಪ ಕಾಂಬ್ಳೆ ಉಪಾಧ್ಯಕ್ಷ ವಿಠ್ಠಲಸೊನ್ನದ ಪ್ರ. ಕಾರ್ಯದರ್ಶಿ ಜಕ್ರಿಯಾ ಕಾಲೇಭಾಗ ಖಜಾಂಚಿಯನ್ನಾಗಿ ಆರಿಸಿತು. ಮಂಗಳೂರಿನಲ್ಲಿ ಸೇರುವ ಸಿ. ಐ. ಟಿ. ಯು ಸಮ್ಮೇಳನಕ್ಕೆ ಎರಡು ಪ್ರತಿನಿಧಿಗಳನ್ನು ಆರಿಸಲಾಯಿತು.

ಸಿ. ಐ. ಟಿ. ಯು. ರಾಜ್ಯ ಸಮ್ಮೇಳನ

ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ವಿನ ನಾಲ್ಕನೇ ಸಮ್ಮೇಳನ ಮೇ 14 ರಿಂದ 17ರ ವರೆಗೆ ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಸೇರುತ್ತದೆ. ಪ್ರತಿನಿಧಿಗಳಿಗೆ ವಸತಿ — ಊಟದ ವ್ಯವಸ್ಥೆಯನ್ನು ಹೈಸ್ಕೂಲಿನಲ್ಲಿಯೇ ಮಾಡಲಾಗಿದೆ. ಬಸ್‌ಸ್ಟ್ಯಾಂಡಿನಲ್ಲಿ ತಾ. 13-14 ರಂದು ಸ್ವಯಂ ಸೇವಕರ ವ್ಯವಸ್ಥೆ ಮಾಡಲಾಗಿದೆ. ಮಂಗಳೂರಿಗೆ ಬರುವ ಪ್ರತಿನಿಧಿಗಳು ಅವರ ಸಹಾಯ ಪಡೆಯಬೇಕು.

ಅಖಿಲ ಭಾರತ ಸಿ. ಐ. ಟಿ. ಯು. ವಿನ ಅಧ್ಯಕ್ಷರಾದ ಕಾ. ಬಿ. ಟಿ. ರಣದಿವೆಯವರು ಸಮ್ಮೇಳನವನ್ನು ಟೌನ್‌ಹಾಲಿನಲ್ಲಿ 14 ರಂದು ಮುಂಜಾನೆ 11 ಗಂಟೆಗೆ ಉದ್ಘಾಟಿಸುತ್ತಾರೆ ಆದ್ದರಿಂದ ಎಲ್ಲ ಪ್ರತಿನಿಧಿಗಳು 14 ರಂದು ಮುಂಜಾನೆ ಬರಬೇಕಾಗಿ ವಿನಂತಿ. ಪ್ರತಿನಿಧಿಗಳು ಬರುವಾಗ ತಂತಮ್ಮ ಯೂನಿಯನ್‌ಗಳ ಬ್ಯಾನರ್, ಧ್ವಜಗಳನ್ನು ತರಬೇಕು.

ಸಿ. ನಂಜುಂಡಪ್ಪ
ಕಾರ್ಯದರ್ಶಿ
ಸಿ. ಐ. ಟಿ. ಯು. ರಾಜ್ಯ ಸಮಿತಿ.

ತೀರ್ಥಹಳ್ಳಿಯಲ್ಲಿ ಬೀಡಿ ಕಾರ್ಮಿಕರ ಸಮ್ಮೇಳನ

ಏಪ್ರಿಲ್ 22 ರಂದು ತೀರ್ಥಹಳ್ಳಿ ತಾಲ್ಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದ ಬೀಡಿ ಕಾರ್ಮಿಕರ ಸಮ್ಮೇಳನವು ಹಿರಿಯ ಬೀಡಿ ಕಾರ್ಮಿಕರಾದ ಕಾ. ಪದ್ಮಾವತಿಯವರಿಂದ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ಸಂಘದ ಉಪಾಧ್ಯಕ್ಷರಾದ ಕಾ. ಮಹಮದ್ ಇಸ್ಮಾಯಿಲ್ ರವರು ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಕಾ. ಕೆ. ಎಂ. ಶ್ರೀನಿವಾಸ್‌ರವರು ವಹಿಸಿದ್ದರು.

ಸಮ್ಮೇಳನವನ್ನು ಕರ್ನಾಟಕರಾಜ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಶಾಸಕರಾದ ಕಾ. ಪಿ. ರಾಮಚಂದ್ರ ರಾವ್ ಇವರು ಉದ್ಘಾಟನೆ ಮಾಡುತ್ತಾ, ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕಳೆದ 25-30 ವರ್ಷಗಳಿಂದ ನಡೆದುಬಂದ ಹೋರಾಟ ಹಾಗೂ ಸಿಕ್ಕಿದ ಸವಲತ್ತುಗಳ ಬಗ್ಗೆ ವಿವರಣೆ ನೀಡಿದರು.

ಸಂಘದ ಕಾರ್ಯದರ್ಶಿಯವರಾದ ಜಾವಗಲ್ ವಿಜಯಕುಮಾರ್ ಇವರು ಕಳೆದ ಒಂದು ವರ್ಷದಲ್ಲಿ ನಡೆದ ಹೋರಾಟ ಹಾಗೂ ಇತರ ಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸಿದರು.

ಬೀಡಿ ಕಾರ್ಮಿಕರ ಮುಖಂಡರಾದ ಕಾ. ಮಹಮ್ಮದ್ ದಸ್ತಗೀರ್ ಮತ್ತು ಕಾ. ಕೆ. ಶಂಕರ್ ಇವರು ಬೀಡಿ ಕಾರ್ಮಿಕರು ರಾಜ್ಯದಾದ್ಯಂತ ನಡೆಸಿದ ಹೋರಾಟ, ಮಾಡಿದ ಒಪ್ಪಂದಹಾಗೂ ಸಿಕ್ಕಿದ ಸವಲತ್ತುಗಳ ಬಗ್ಗೆ ವಿವರಣೆ ನೀಡಿದರು.

ಸಾಯಂಕಾಲ ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಕಾ. ಪಿ. ರಾಮಚಂದ್ರರಾವ್, ಕೆ. ಕಂಠಿ, ಮಹಮ್ಮದ್‌ದಸ್ತಗೀರ್, ಕಾ. ಶ್ರೀನಿವಾಸ ಮೊದಲಾದವರು ಭಾಷಣ ಮಾಡಿದರು.

(7ನೇ ಪುಟದಿಂದ)

29·4·84 ರ ಸಂಜೆ ಯಶವಂತಪುರದಲ್ಲಿ ಡಿ.ವೈ.ಎಫ್.ಐ. ಘಟಕವನ್ನು ರಚಿಸಲಾಯಿತು. ಸಭೆಯಲ್ಲಿ ಹಾಜರಿದ್ದ ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ರವರು ಡಿ.ವೈ.ಎಫ್.ಐ. ರಾಷ್ಟ್ರೀಯಮಟ್ಟದ ಮತ್ತು ರಾಜ್ಯದಲ್ಲಿ ವಿಜಯನಗರ ಕಾರ್ಖಾನೆಯನ್ನು ಸ್ಥಾಪಿಸುವಲ್ಲಿ ಡಿ. ವೈ. ಎಫ್. ಐ. ನ ಹೋರಾಟ; ಎರಡನೇ ರಾಷ್ಟ್ರೀಯ ಸಮ್ಮೇಳನದ ಬಗ್ಗೆ ಮತ್ತು ಸಂಘಟನೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು.

ಸಭೆಯಲ್ಲಿ ಹಾಜರಿದ್ದ ಸುಮಾರು 50 ಯುವಜನರು ಡಿ.ವೈ.ಎಫ್.ಐ. ಕಟ್ಟುವುದಾಗಿ ಪ್ರತಿಜ್ಞೆ ಮಾಡಿದರು. ನಂತರ ಸಮಿತಿಯೊಂದನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾ. ಹನುಮಯ್ಯ ಉಪಾಧ್ಯಕ್ಷ ಕಾ. ವೇಣುಗೋಪಾಲ ಕಾರ್ಯದರ್ಶಿಯಾಗಿ ಕಾ. ರಾಮಾಂಜನೇಯ, ಸಹಕಾರ್ಯದರ್ಶಿಯಾಗಿ ಕಾ. ಎ. ಎನ್. ಮೂರ್ತಿ ಮತ್ತು ಖಜಾಂಚಿಯಾಗಿ ಕಾ. ಟಿ. ಎನ್. ಹನುಮಯ್ಯನವರನ್ನು ಆಯ್ಕೆ ಮಾಡಲಾಯಿತು.

Printed & Publishedby P. Ramachandra Raoby him on behalf of the Communist Pary of India (Marxist) Karnataka State Co nmittee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154

Editor : P. Ramachandra Rao Managing Editor : N. K. Upadhyaya